# ಐಕ್ಯರಂಗ

ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ಕರ್ನಾಟಕ ರಾಜ್ಯಸಮಿತಿಯ ಮುಖಪತ್ರಿಕೆ

ಸಂಪುಟ 3 | ಸಂಚಿಕೆ 27 | ಜುಲೈ 5. 1981 | ಬೆಲೆ : 60 ಪೈಸೆ


## ಶೈಕ್ಷಣಿಕ ರಂಗದಲ್ಲಿ ಅರಾಜಕತೆ

### ಸಂಪಾದಕೀಯ

ದೇಶದ ಶೈಕ್ಷಣಿಕರಂಗವು ವ್ಯಾಪಾರೀಕರಣವಾಗುತ್ತಾ ಬಂದಿದೆ. ಕರ್ನಾಟಕ ರಾಜ್ಯದಲ್ಲಂತೂ ಶೈಕ್ಷಣಿಕರಂಗವು ಮಿತಿಮೀರಿ ವ್ಯಾಪಾರೀಕರಣವಾಗಿದೆ. ಎಳೆಯ ಬಾಲಕ, ಬಾಲಕಿಯರಿಗಾಗಿರುವ ನರ್ಸರಿ ಶಾಲೆಗಳಿಂದ ಮೊದಲ್ಗೊಂಡು ವೃತ್ತಿಪರ ಶಿಕ್ಷಣಕೊಡುವ ಸಂಸ್ಥೆಗಳೆಲ್ಲವೂ ಮಾರುಕಟ್ಟೆಗಳಂತಾಗಿವೆ. ದೇಶದ ಪ್ರಧಾನಿಯವರೇ ಕೇಪಿಟೇಶನ್ ಶುಲ್ಕದಂತದ್ದನ್ನು ತೆಗೆದುಹಾಕಬೇಕೆಂದು ಹೇಳಿರುವರಾದರೂ ರಾಜ್ಯಸರಕಾರ ಈ ಬಗ್ಗೆ ಏನೇನೂ ಮಾಡುತ್ತಿಲ್ಲ. ಈಗತಾನೆ ರಚಿಸಿರುವ ಸಮಿತಿಯೊಂದರ ವ್ಯಾಪ್ತಿಗೆ ವೃತ್ತಿಪರ ಶಿಕ್ಷಣ ಸಂಸ್ಥೆಗಳಲ್ಲಿ ತೆಗೆದುಕೊಳ್ಳುವ ಕೇಪಿಟೇಶನ್ ಶುಲ್ಕದ ವಿಚಾರ ಬರುವುದಿಲ್ಲ. ಬಡಜನತೆಯ, ಜನಸಾಮಾನ್ಯರ ಮಕ್ಕಳಿಗೆ ವಿದ್ಯಾರ್ಜನೆ ಮಾಡುವುದು ಅತ್ಯಂತ ಕಷ್ಟವಾಗಿದೆ.

ಇದೀಗ ನಿರುದ್ಯೋಗ ಜಾಸ್ತಿ ಇರುವುದರಿಂದ ಕಾಲೇಜುಗಳನ್ನು ಹೊಸದಾಗಿ ಪ್ರಾರಂಭಿಸುವುದಿಲ್ಲವೆಂದು ರಾಜ್ಯ ವಿದ್ಯಾಮಂತ್ರಿ ಹೇಳಿದ್ದಾರೆ. ನಿರುದ್ಯೋಗ ಸಮಸ್ಯೆಗೆ ಕಾರಣ ರಾಷ್ಟ್ರವನ್ನು ಆಡಳಿತೆ ಮಾಡಿಕೊಂಡು ಬಂದವರು ಬಂಡವಾಳಶಾಹಿ ಮಾರ್ಗದಲ್ಲಿ ದೇಶವನ್ನು ಮುನ್ನಡೆಸುತ್ತ ಬಂದಿರುವುದೇ ಆಗಿದೆಯೇ ಹೊರತು ಕಾಲೇಜುಗಳ ಸಂಖ್ಯೆ ಹೆಚ್ಚಾಗಿ ಅಲ್ಲ. ನಿರುದ್ಯೋಗ ಸಮಸ್ಯೆಯ ಪರಿಹಾರವನ್ನು ಆರ್ಥಿಕ-ರಾಜಕೀಯ ಕ್ರಮಗಳಿಂದ ನಿವಾರಿಸಬಹುದೇ ಹೊರತು ಕಾಲೇಜುಗಳನ್ನು ಪ್ರಾರಂಭಿಸದಿರುವುದರಿಂದಲ್ಲ. ಆದುದರಿಂದಲೇ ಕಾಲೇಜುಗಳನ್ನೂ ಹೆಚ್ಚಿಸಬೇಕು. ಉದ್ಯೋಗಾವಕಾಶಗಳನ್ನೂ ಹೆಚ್ಚಿಸಬೇಕು.

ನಿರಕ್ಷರತೆಯಿಂದ ಕೂಡಿರುವ ಭಾರತ ದೇಶದಲ್ಲಿ ಗ್ರಾಮಾಂತರ ಪ್ರದೇಶಗಳಂತೂ ವಿದ್ಯಾಭ್ಯಾಸದ ಸೌಕರ್ಯಗಳಿಲ್ಲದೆ ಅನ್ಯಾಯಕ್ಕೊಳಗಾಗಿರುವಾಗ, ಪ್ರತಿ ಹಳ್ಳಿಗಳಲ್ಲೂ ಸಾಕಷ್ಟು ಸವಲತ್ತುಗಳಿಂದ ಕೂಡಿದ ಶಾಲೆಗಳ ರಚನೆಯಾಗಬೇಕು. ಈ ದಿಸೆಯಲ್ಲಿ ರಾಜ್ಯಸರಕಾರ ಏನೇನೂ ಮಾಡಿಲ್ಲ. ಹೊಸ ಶಾಲಾವರ್ಷ ಪ್ರಾರಂಭವಾಗುತ್ತಿದ್ದಂತೆ ದೇಶದ ಭವಿಷ್ಯವನ್ನು ನಿರ್ಧರಿಸುವ ಮಕ್ಕಳಲ್ಲಿ, ವಿದ್ಯಾರ್ಥಿಗಳಲ್ಲಿ ಭವಿಷ್ಯದ ಬಗ್ಗೆ ಅನಿಶ್ಚಿತತೆ ಮೂಡಿದೆ.

ಶಾಲಾ-ಕಾಲೇಜುಗಳಿಗೆ ಸೇರಲು ಜಾತಿ ಸರ್ಟಿಫಿಕೇಟು ಕೊಡುವುದರಲ್ಲಿಂದ ಮೊದಲ್ಗೊಂಡು ಪರೀಕ್ಷಾ ಪತ್ರ ತಿದ್ದುವುದರ ತನಕ ಅತ್ಯಂತ ಹೆಚ್ಚಿನ ಭ್ರಷ್ಟಾಚಾರ ನಡೆಯುತ್ತಿರುವುದು ಸಹಸ್ರಾರು ಮಂದಿಯನ್ನು ತೊಂದರೆಗೀಡುಮಾಡಿದೆ. ಭ್ರಷ್ಟಾಚಾರ, ಅರಾಜಕತೆಗಳಿಂದ ಶೈಕ್ಷಣಿಕ ರಂಗವು ಗೊಂದಲಮಯವಾಗಿದೆ. ಪ್ರಗತಿಪರ ಸಂಘಟನೆಗಳೂ, ಶೈಕ್ಷಣಿಕ ಕ್ಷೇತ್ರದಲ್ಲಿ ದುಡಿಯುವವರೂ, ಸಾರ್ವಜನಿಕರೂ ಪರಿಸ್ಥಿತಿಯ ಗಂಭೀರತೆಯನ್ನು ಅರ್ಥಮಾಡಿ, ಶೈಕ್ಷಣಿಕರಂಗದಲ್ಲಿ ಸುಧಾರಣೆ ತರಲು ಶ್ರಮಿಸಬೇಕು.

## ಇಬ್ರಾಹಿಂ ಪ್ರಕರಣ ಕುರಿತು

# ರಾಜ್ಯದಾದ್ಯಂತ ಪ್ರತಿಭಟನಾ ಅಲೆ

ತನ್ನ ಸಂಪುಟದ ಕ್ಯಾಬಿನೆಟ್ ದರ್ಜೆಯ ಸಚಿವನೊಬ್ಬ ಅಪಾದನೆಗೊಳಗಾಗಿರುವಾಗ ಮುಖ್ಯಮಂತ್ರಿ ಗುಂಡೂರಾಯರು ಅವರನ್ನು ಉಚ್ಚಾಟಿಸುವ ಬದಲು ಸಮರ್ಥಿಸಿಕೊಳ್ಳುತ್ತಿರುವುದು ರಾಜ್ಯದ ಆಡಳಿತದ ಅಧಃಪತನಕ್ಕೆ ಕೈಗನ್ನಡಿಯಾಗಿದೆ. ಇದಕ್ಕೆ ಕಳಶವಿಟ್ಟಂತೆ ವಿಧಾನಸಭೆಯಿಂದ ನಿಲುವಳಿ ಸೂಚನೆಗೆ ಅವಕಾಶಕೊಡದೆ ವಿರೋಧ ಪಕ್ಷದ ಸದಸ್ಯರನ್ನು ಉಚ್ಚಾಟಿಸಲಾಗಿದೆ.

ಇಬ್ರಾಹಿಂರನ್ನು ವಜಾಮಾಡುವಂತೆ ಒತ್ತಾಯಿಸಿ ರಾಜ್ಯದ ಎಲ್ಲ ಕಡೆ ಪ್ರತಿಭಟನಾ ಪ್ರದರ್ಶನಗಳು ನಡೆಯುತ್ತಿವೆ. ಯಶಸ್ವೀ ಬಂದ್‌ಗಳು ನಡೆದಿವೆ. ಬೆಂಗಳೂರಿನಲ್ಲಿ ವಿರೋಧ ಪಕ್ಷಗಳ ಜಂಟೀ ಆಶ್ರಯದಲ್ಲಿ ಬೃಹತ್ ಬಹಿರಂಗ ಸಭೆ ನಡೆದಿದೆ. ಸಭೆಯಲ್ಲಿ ಮಾತನಾಡಿದ ಕಾಂ. ಸೂರ್ಯನಾರಾಯಣರಾವ್, ಶ್ರೀ ದೇವರಾಜ ಅರಸ್, ಚಂದ್ರೇಗೌಡ, ಬೊಮ್ಮಾಯಿ, ಎ. ಕೆ. ಸುಬ್ಬಯ್ಯ ಮೊದಲಾದವರು ಮುಖ್ಯಮಂತ್ರಿಯ ನಡತೆಯನ್ನು ಕಟುವಾಗಿ ಟೀಕಿಸಿರುವರು. ತುಮಕೂರು, ಗುಲ್ಬರ್ಗಾ, ಹಾಸನ, ಚಿಕ್ಕಮಗಳೂರು, ಹರಿಹರ, ಬಿಜಾಪುರ ಮೊದಲಾದೆಡೆ ಪ್ರತಿಭಟನಾ ಸಭೆ, ಮತ ಪ್ರದರ್ಶನ ಮತ್ತು ಬಂದ್ ನಡೆದಿವೆ. ಮಂಗಳೂರಿನಲ್ಲಿ 8-7-81ರಂದು ಉಭಯ ಕಮ್ಯುನಿಸ್ಟ್ ಪಕ್ಷಗಳ ಆಶ್ರಯದಲ್ಲಿ ಬಹಿರಂಗಸಭೆ ನಡೆಯಲಿದೆ. ಪ್ರಜಾಪ್ರಭುತ್ವ ಮಹಿಳಾ ಸಂಘಟನೆಯ (DWA) ಕಾರ್ಯಕರ್ತರು 1-7-81ರಂದು ಇಬ್ರಾಹಿಂರ ಮನೆಯ ಎದುರು ಪ್ರದರ್ಶನ ನಡೆಸಿರುವರು.

ಇಷ್ಟೆಲ್ಲಾ ನಡೆಯುತ್ತಿದ್ದರೂ ಗುಂಡೂರಾಯರು ಇಬ್ರಾಹಿಂರನ್ನು ಕಿತ್ತೊಗೆಯದೇ ಇರುವುದು ನಾಚಿಕೆಗೇಡು. ಇತ್ತೀಚೆಗೆ ಇಬ್ರಾಹಿಂರು ದೆಹಲಿಗೆ ಹೋದಾಗ ಜನವಾದಿ ಮಹಿಳಾ ಸಂಘಟನೆಯ ಕಾರ್ಯಕರ್ತರು ಅವರನ್ನು ಕರ್ನಾಟಕ ಭವನದಲ್ಲಿ ಘೆರಾವೋ ಮಾಡಿದ್ದರು. ತಮ್ಮ ಮೇಲೆ ವಿನಾಕಾರಣ ಆಪಾದನೆ ಮಾಡುತ್ತಿದ್ದಾರೆ ಎಂದು ಇಬ್ರಾಹಿಂ ಘೆರಾವೋ ಮಾಡಿದ ಮಹಿಳೆಯರಿಗೆ ತಿಳಿಸಿದ್ದಾರಂತೆ! (ಪಾಪ).

ಭದ್ರಾವತಿಯ ಕೃಷ್ಣನ ಕೊಲೆ, ರೋಲರ್ ಮಿಲ್ ಪ್ರಕರಣ, ರೋಲೆಕ್ಸ್ ಕೈಗಡಿಯಾರ ಪ್ರಕರಣ ಇತ್ಯಾದಿಗಳಲ್ಲಿ ಭಾಗಿಯಾಗಿರುವ ಇಬ್ರಾಹಿಂರನ್ನು ಕೂಡಲೇ ವಜಾಮಾಡಬೇಕೆಂದು ಸಿ. ಪಿ. ಐ. (ಎಂ)ದ ಕಾರ್ಯದರ್ಶಿ ಕಾಂ. ಎಂ. ಕೆ. ಭಟ್‌ರು ಒತ್ತಾಯಪಡಿಸಿದ್ದಾರೆ.

ಇಬ್ರಾಹಿಂ ಸಂಪ್ರದಾಯವನ್ನನುಸರಿಸಿ ತಾವಾಗಿ ರಾಜೀನಾಮೆ ಕೊಡುತ್ತಾರೆಂದು ಊಹಿಸುವುದು ಮೂರ್ಖತನವಾದೀತು. ಈ ಭ್ರಷ್ಟರನ್ನು ಉಚ್ಚಾಟಿಸುವ ತನಕ ಹೋರಾಡಲು ಕಂಕಣಬದ್ಧರಾಗಬೇಕು. ಜನದ್ರೋಹಿಗಳಿಗೆ ತಕ್ಕ ಪಾಠ ಕಲಿಸಬೇಕು.

o

## ಇತ್ತೀಚಿನ ಕಳವಳಕಾರಕ ಘಟನೆಗಳ ಕುರಿತು

# ರಾಜ್ಯ ಸೆಕ್ರೆಟಾರಿಯೇಟ್ ಹೇಳಿಕೆ

ಸಚಿವ ಇಬ್ರಾಹಿಂ ಅವರು ತಮ್ಮ ನಿವಾಸದಲ್ಲಿ ಮಹಿಳೆಯೋರ್ವಳನ್ನು ಅಕ್ರಮವಾಗಿ ಇರಿಸಿಕೊಂಡ ಘಟನೆಯಲ್ಲಿ ಭಾಗಿಯಾಗಿರುವುದು, ಸಿ.ಐ.ಡಿ. ವಿಭಾಗದ ಡಿ. ಐ. ಜಿ. ಶ್ರೀ ಎನ್.ಬಿ. ಭಟ್ ಅವರನ್ನು ಬಲಾತ್ಕಾರದಿಂದ ರಜೆಯ ಮೇಲೆ ಹೋಗುವಂತೆ ಮಾಡಿರುವುದು ಮತ್ತು ಶಿವಮೊಗ್ಗ ಜಿಲ್ಲೆಯ ಎಸ್. ಪಿ. ಅವರನ್ನು ವರ್ಗಾಯಿಸಿರುವುದು; ಇತ್ತೀಚೆಗೆ ನಡೆದಿರುವ ಎಫ್. ಎಮ್. ಖಾನ್ ಘಟನೆ ಮತ್ತು ಅದರಲ್ಲಿ ನಗರ ಪೋಲೀಸ್ ಕಮೀಷನರ್‌ರವರ ಪಾತ್ರ ಹಾಗೂ ತಪ್ಪಿತಸ್ಥರನ್ನು ಮುಚ್ಚಿಡಲು ನಡೆಸಿರುವ ಪ್ರಯತ್ನ- ಈ ಪ್ರಕರಣಗಳನ್ನು ಏನೋ ಒಂದು ನಡೆದಿದೆ ಎಂಬಂತೆ ಕಾಣುವುದು ಸಾಧ್ಯವಿಲ್ಲ. ಒಂದೂವರೆ ವರ್ಷಕ್ಕೆ ಹಿಂದೆ ಗುಂಡೂರಾವ್ ಅವರ ಸರಕಾರ ರಾಜ್ಯದಲ್ಲಿ ಅಸ್ತಿತ್ವಕ್ಕೆ ಬಂದ ಮೇಲೆ ಆಡಳಿತ ಪಕ್ಷವು ಪ್ರೋತ್ಸಾಹಿಸುತ್ತಾ ಬಂದಿರುವ ವ್ಯವಸ್ಥಿತ ಕುಹಕ ರಾಜಕೀಯದ ಒಂದು ಅಂಗವಾಗಿಯೇ ಈ ಎಲ್ಲಾ ಘಟನೆಗಳನ್ನು ನೋಡಬೇಕು.

ಪ್ರಮುಖ ಪತ್ರಿಕಾ ಕಛೇರಿಗಳ ಮೇಲಿನ ಧಾಳಿಯೂ ಸೇರಿದಂತೆ ಪತ್ರಿಕೆಗಳ ಮೇಲೆ ನಡೆಯುತ್ತಲಿರುವ ಆಕ್ರಮಣ, ಕಾರ್ಮಿಕರ ಸಂಘಟನಾ ಹಕ್ಕುಗಳ ಮೇಲೆ ಸತತವಾಗಿ ನಡೆದಿರುವ ಧಾಳಿ ಮತ್ತು ಕಾರ್ಮಿಕ ಸಂಘಟನೆಗಳ ಕಛೇರಿ ಹಾಗೂ ಮುಖಂಡತ್ವಗಳನ್ನು ಬಲಾತ್ಕಾರದಿಂದ ಕಿತ್ತುಕೊಂಡಿರುವುದು, ಕಾಂಗ್ರೆಸ್(ಯು) ಕಛೇರಿಯ ಮೇಲಿನ ಧಾಳಿಯೂ ಸೇರಿದಂತೆ ವಿರೋಧ ಪಕ್ಷಗಳ ಮೇಲೆ ನಡೆದಿರುವ ದಾಳಿ,-ಸರಕಾರಿ ಯಂತ್ರದ ಸಹಾಯದಿಂದ ಎಫ್. ಎಮ್. ಖಾನ್ ಮತ್ತು ಅವರ ಅನುಯಾಯಿಗಳು ಸಂಘಟಿಸುತ್ತಾ ಬಂದಿರುವ ಈ ಅರೆಫ್ಯಾಸಿಸ್ಟ್ ಮತ್ತು ಗೂಂಡಾ ಕ್ರಮಗಳು ವಿರೋಧ ಶಕ್ತಿಗಳನ್ನು ದಮನ ಮಾಡುವುದಕ್ಕಾಗಿ ಯೋಜಿತವಾಗಿಯೇ ನಡೆದಿವೆ. ಈ ಎಲ್ಲಾ ಘಟನೆಗಳ ಸಂದರ್ಭದಲ್ಲಿ ಪೋಲೀಸರು ಮೂಕಪ್ರೇಕ್ಷಕರಾಗಿ ಇದ್ದರು ಅಥವಾ ವೈಕೋ ಯೂನಿಯನ್‌ಗೆ ಸಂಬಂಧಪಟ್ಟ ಘಟನೆಯಂತಹವುಗಳಲ್ಲಿ ಮತ್ತು ಕಾಂಗ್ರೆಸ್(ಯು) ಕಛೇರಿಯ ಮೇಲೆ ನಡೆದಿರುವ ಧಾಳಿಯಂತಹ ಘಟನೆಗಳಲ್ಲಿ ಪೋಲೀಸರು ಕಾಂಗ್ರೆಸ್ ಗೂಂಡಾಗಿರಿಗೆ ಪ್ರತ್ಯಕ್ಷ ಬೆಂಬಲವಿತ್ತಿರುವರು. ಶ್ರೀ ನಿಜಾಮುದ್ದೀನರು ನಗರದ ಪೋಲೀಸ್ ಕಮೀಷನರಾಗಿ ಅಧಿಕಾರ ವಹಿಸಿಕೊಂಡ ಮೇಲೆ, ನಗರದಲ್ಲಿ ಕಾಂಗ್ರೆಸ್ ಗೂಂಡಾಗಿರಿಯು ಅಡ್ಡಿ ಆತಂಕಗಳಿಲ್ಲದೆ ಮುಂದುವರಿದಿದೆ. ವಿರೋಧ ಪಕ್ಷಗಳು ಮತ್ತು ಕಾರ್ಮಿಕರ ಸಂಘಟನೆಗಳು ಪ್ರಜಾಪ್ರಭುತ್ವ ರೀತಿಯಲ್ಲಿ ಪ್ರತಿಭಟಿಸುವುದನ್ನು ತಡೆಯಲು ಮತ್ತು ಕಾಂಗ್ರೆಸ್ ಗೂಂಡಾಗಳಿಗೆ ಯಾರೂ ಅಡ್ಡಿಬಾರದಂತೆ ಮಾಡುವ ಉದ್ದೇಶದಿಂದ ಕಳೆದ ಒಂದು ವರ್ಷದಿಂದಲೂ ಪ್ರತಿಬಂಧಕಾಜ್ಞೆಯನ್ನು ನಗರದಲ್ಲಿ ಸತತವಾಗಿ ಜಾರಿ ಮಾಡಲಾಗುತ್ತಿದೆ.

ಕಾಂಗ್ರೆಸ್ ಎಂ. ಪಿ. ಶ್ರೀ ಎಫ್.ಎಂ. ಖಾನ್ ಅವರ "ಮಧ್ಯರಾತ್ರಿಯ ನಾಟಕ"ದಲ್ಲಿ ನಗರದ ಪೋಲೀಸ್ ಕಮೀಷನರ್‌ರವರ ಪಾತ್ರ, ಮಂತ್ರಿ ಇಬ್ರಾಹಿಂ ಅವರ ಮನೆಯಲ್ಲಿ ಮಹಿಳೆಯೋರ್ವಳನ್ನು ಬಲಾತ್ಕಾರದಿಂದ ಉಳಿಸಿಕೊಂಡ ಸಂದರ್ಭದಲ್ಲಿ ಇನ್ನೋರ್ವ ಡಿ.ಐ.ಜಿ.ಯೂ ಸೇರಿದಂತೆ ಪೋಲೀಸ್ ಕಮೀಷನರ್‌ರವರು ಇದ್ದಿರುವುದು—ಇವೆಲ್ಲಾ ಪೋಲೀಸ್ ಇಲಾಖೆಯ ಹೆಸರಿಗೆ ಮಸಿ ಬಳಿದಿವೆ. ಪೋಲೀಸ್ ಇಲಾಖೆಯ ಮೇಲಿರುವ ವಿಶ್ವಾಸವನ್ನು ಸಾರ್ವಜನಿಕರು ಕಳೆದುಕೊಂಡಿರುವರಷ್ಟೇ ಅಲ್ಲ ಕೆಲವು

(ಕಡೇ ಪುಟ ನೋಡಿ)

# ರೈತಸಂಘದ ಕೌನ್ಸಿಲ್ ಸಭೆ

ತಾರೀಖು 16, 17 ಮತ್ತು 18 ಜೂನ್ 1981ರಂದು ಬೆಳಗಾಂ ಜಿಲ್ಲೆಯ ಸೌಂದತ್ತಿಯ ಎಲ್ಲಮ್ಮ ಗುಡಿಯ ಬಳಿ ಸೇರಿದ "ಕರ್ನಾಟಕ ರಾಜ್ಯ ರೈತಸಂಘ"ದ ಕೌನ್ಸಿಲ್‌ನ ಸಭೆಯು ಅಖಿಲಭಾರತ ಕಿಸಾನ್ ಸಭಾ ಕಾರ್ಯದರ್ಶಿ ಕಾಂ. ಚಾತುನ್ನಿ ಮಾಸ್ಟರರಿಂದ ಉದ್ಘಾಟಿಸಲ್ಪಟ್ಟಿತು. ದೇಶದಲ್ಲಿ ಎಲ್ಲಿಯೇ ಆಗಲಿ ರೈತರು ಮತ್ತು ಕೃಷಿಕೂಲಿಗಾರರು ಮುಖ್ಯವಾಗಿ 1) ರೈತರು ಬೆಳೆಸಿದ ಬೆಳೆಗಳಿಗೆ ಲಾಭದಾಯಕವಾದ ಬೆಲೆಗಳು ಸಿಗಲು 2) ಉತ್ತಮ ಮತ್ತು ತೀವ್ರ ಭೂಸುಧಾರಣೆಗಳ ಜ್ಯಾರಿಗಾಗಿ ಮತ್ತು 3) ಕೃಷಿಕೂಲಿಗಾರರ ಮತ್ತು ಬಡರೈತರ ಕೂಲಿ, ಮನೆ ನಿವೇಶನ, ಕಡಿಮೆಬಡ್ಡಿ ಸಾಲ ಇತ್ಯಾದಿ ಪ್ರಶ್ನೆಗಳ ಬಗ್ಗೆ ಹೋರಾಡಲು ಮುಂದಾಗುವಂತೆ ಅಖಿಲಭಾರತ ಕಿಸಾನ್‌ಸಭಾ ಘಟಕಗಳು ಶ್ರಮಿಸಬೇಕೆಂದೂ, ಈ ಎಲ್ಲಾ ಶ್ರಮದ ಫಲವಾಗಿ ರೈತ-ಕಾರ್ಮಿಕರ ನಿಜವಾದ ಸಖ್ಯತೆಯು ಬೆಳೆಯುವಂತಾಗಬೇಕೆಂದು ಕಾಂ. ಚಾತುನ್ನಿ ಮಾಸ್ಟರರು ಕರೆ ಕೊಟ್ಟರು.

ಕರ್ನಾಟಕ ಪ್ರಾಂತ್ಯದ ಕೌನ್ಸಿಲ್ ಸಭೆಯನ್ನು ನರಗುಂದ ದಂಗೆಯ ಖ್ಯಾತಿ ಪಡೆದ ಮುಂದಾಳು ಕಾಂ. ವಿ. ಎನ್. ಹಳಕಟ್ಟಿಯವರು ಸ್ವಾಗತಿಸಿದರು. ಪ್ರಾಂತ ರೈತಸಂಘದ ಅಧ್ಯಕ್ಷರಾದ ಕಾಂ. ಮುಗುವಾಳಪ್ಪರವರು ಅಧ್ಯಕ್ಷತೆ ವಹಿಸಿದ್ದರು.

ಪ್ರಾಂತ ರೈತಸಂಘದ ಕಾರ್ಯದರ್ಶಿ ಕಾಂ. ಪಿ. ರಾಮಚಂದ್ರರಾವ್ ಕಳೆದ ಕೌನ್ಸಿಲಿನ ನಂತರದ ಹತ್ತು ತಿಂಗಳುಗಳಲ್ಲಿ ಕರ್ನಾಟಕ ರಾಜ್ಯದಲ್ಲಿ ನಡೆದ ರೈತಹೋರಾಟಗಳನ್ನು ರೈತರ ಚಳುವಳಿಗಳನ್ನು ವಿಸ್ತಾರವಾಗಿ ವಿವರಿಸಿ ಮತ್ತು ಈ ಎಲ್ಲಾ ಹೋರಾಟಗಳ ಫಲವಾಗಿ ರೈತರು ತಮ್ಮ ಸಂಘಟನೆಯನ್ನು ವರ್ಗಜಾಗೃತಿಯನ್ನು ಹೇಗೆ ಬೆಳೆಸಿಕೊಂಡು ಬರಬೇಕೆಂಬುದರ ಕುರಿತು ಬರಹ ಮೂಲಕದ ವರದಿಯನ್ನು ಸಭೆಯಲ್ಲಿ ಮಂಡಿಸಿದರು.

ಈ ವರದಿ ಮೇಲೆ ಸುಮಾರು 16 ಮಂದಿ ರೈತ ಮುಖಂಡರು ಮತ್ತು ಕಾರ್ಯಕರ್ತರು ಚರ್ಚೆ ನಡೆಸಿ ಕೆಲವು ವಿವರಗಳನ್ನು ತಿದ್ದುಪಡಿಗಳನ್ನೂ ಸೂಚಿಸಿದರು. ಈ ವಿವರಗಳ ಸಮೇತ ವರದಿಯು ಅಂಗೀಕೃತವಾಯಿತು.

ಅನಂತರ ಗುಲ್ಬರ್ಗ, ರಾಯಚೂರು, ಬಿಜಾಪುರ, ಬೀದರ್, ಕೋಲಾರ ಮೊದಲಾದ ಜಿಲ್ಲೆಗಳಲ್ಲಿ ಖಾಯಂ ಆಗಿ ಬರಗಾಲ ಬರುತ್ತಿರುವುದರಿಂದ, ರೈತರು ಕಂಗಾಲಾಗುತ್ತಿರುವುದನ್ನು ಕಂಡು ಈ ಸ್ಥಿತಿ ಬದಲಾವಣೆಗಾಗಿ ಖಾಯಂ ನೆಲೆಯಲ್ಲಿ ಪರಿಹಾರೋಪಾಯಗಳನ್ನು ಒದಗಿಸುವ ಕುರಿತು ಯೋಜನೆ ತಯಾರಿಸುವಂತಾಗಲು ವಿಶಾಲ ತಳಹದಿಯಲ್ಲಿ ರೈತರು ಕಾರ್ಯಕ್ರಮ ಹಾಕುವಂತೆ ಮಾಡಲು ಹಾಗೂ ಈ ಕುರಿತು ಮುತುವರ್ಜಿ ವಹಿಸಿ ಕಾರ್ಯವೆಸಗಲು ರೈತಸಂಘದ ಕೌನ್ಸಿಲ್ ಸಭೆಯು ಸರ್ವಾನುಮತದಿಂದ ತೀರ್ಮಾನಿಸಿತು.

ಸಾಲರದ್ದತಿಯ ಬೇಡಿಕೆಯನ್ನು ಮುಂದಿಟ್ಟು ರೈತರು ಹೋರಾಟ ಮಾಡುವುದನ್ನು ಹತ್ತಿಕ್ಕಲು ತಂದ ಅತ್ಯಂತ ದಮನಕಾರಿಯಾದ ಸುಗ್ರೀವಾಜ್ಞೆಯನ್ನು ಸಭೆಯು ಖಂಡಿಸಿ, ಅದನ್ನು ಕೂಡಲೇ ಹಿಂತೆಗೆಯಬೇಕೆಂದು ಕರ್ನಾಟಕ ಸರ್ಕಾರವನ್ನು ಒತ್ತಾಯಿಸಿ, ಈ ಕೆಳಗಿನ ಠರಾವನ್ನು ಸಭೆಯು ಅಂಗೀಕರಿಸಿತು.

ಕರ್ನಾಟಕ ರಾಜ್ಯದ ಕೃಷಿಕೂಲಿಗಾರರ ಸ್ಥಿತಿಗತಿ ಇತರ ರಾಜ್ಯಗಳ ಕೃಷಿಕೂಲಿಗಾರರ ಸ್ಥಿತಿಗತಿಯೊಡನೆ ಹೋಲಿಸಿ ನೋಡಿದಾಗ ಬಹಳ ಶೋಚನೀಯವೆಂದು ಕಂಡುಬಂದು ಇವರ ಕೂಲಿಯನ್ನು ಕೂಡಲೇ ಪರಿಷ್ಕರಿಸಲು ಸರಕಾರವು ಕ್ರಮವಹಿಸಬೇಕೆಂದು ಇವರ ಎಲ್ಲಾ ಪ್ರಶ್ನೆಗಳ ಬಗ್ಗೆ ನಿರಂತರ ನೆಲೆಯಲ್ಲಿ ಕೆಲಸ ಮಾಡಲು ರಾಜ್ಯದ ಎಲ್ಲಾ ರೈತಸಂಘ ಘಟಕಗಳು ಪ್ರತ್ಯೇಕ ಗಮನಕೊಡಬೇಕು ಎಂದು ಸಭೆಯು ಕರೆಕೊಟ್ಟಿತು.

ಹಲವಾರು ದಮನಕಾರಿ ಕಾನೂನುಗಳ ಮೂಲಕ ರೈತ ಕಾರ್ಮಿಕರ ಮತ್ತು ನಾಗರಿಕರ ನಾಗರಿಕ ಮತ್ತು ಪ್ರಜಾಸತ್ತಾತ್ಮಕ ಹಕ್ಕುಗಳನ್ನು ಹತ್ತಿಕ್ಕಲು ಹವಣಿಸುತ್ತಿರುವ ಉದಾಹರಣೆಗಾಗಿ ಬೆಂಗಳೂರಿನಲ್ಲಿ ಖಾಯಂ ಆಗಿ ಪೋಲೀಸ್ ಆ್ಯಕ್ಟ್ 35ನೇ ಸೆಕ್ಷನನ್ನು ಉಪಯೋಗಿಸಿ ಸಭೆ ಇತ್ಯಾದಿಗಳನ್ನು ಖಾಯಂ ಆಗಿ ನಿರಾಕರಿಸುವ ಸರಕಾರದ ನೀತಿಯನ್ನು ಸಭೆಯು ಖಂಡಿಸಿತು.

ಕೊನೆಗೆ ಸೌಂದತ್ತಿಯ ಮಾಜಿ ಮುನಿಸಿಪಲ್ ಅಧ್ಯಕ್ಷ ಮತ್ತು ಮಲಪ್ರಭಾ ರೈತರ ಹೋರಾಟದಲ್ಲಿ ಪ್ರಮುಖಪಾತ್ರ ವಹಿಸಿದ ರೈತ ಮುಖಂಡ ಕಾಂ. ಕಪ್ಪಣ್ಣನವರು ಧನ್ಯವಾದ ಅರ್ಪಿಸಿ ಸೌಂದತ್ತಿಯಲ್ಲಿ ಕರ್ನಾಟಕ ರಾಜ್ಯದ ಮೂಲೆ ಮೂಲೆಗಳಿಂದ ರೈತಮುಖಂಡರು ಬಂದು ರಾಜ್ಯ ಕೌನ್ಸಿಲ್ ಸಭೆಯನ್ನು ನಡೆಸಿ, ರೈತರು ಎದುರಿಸುವ ಪ್ರಮುಖ ಪ್ರಶ್ನೆಗಳ ಕುರಿತು ಗಂಭೀರ ಚರ್ಚೆ ಮತ್ತು ತೀರ್ಮಾನಗಳನ್ನು ಕೈಗೊಂಡುದಕ್ಕಾಗಿ ಧನ್ಯವಾದವನ್ನಿತ್ತರು.

○

# ಅಶುದ್ಧ ನೀರಿನ ಪೂರೈಕೆಗೆ ಪ್ರತಿಭಟನೆ

ಬೆಂಗಳೂರಿನ ನಾಗರಿಕರಿಗೆ ಪೂರೈಕೆಯಾಗುತ್ತಿರುವ ನೀರು ಅಶುದ್ಧವಾಗಿರುವ, ಕ್ರಿಮಿಕೀಟಕಗಳಿರುವ ವರದಿಯಾಗಿತ್ತು. ನಗರದ ಬೇರೆ ಬೇರೆ ಕಡೆಗಳಲ್ಲಿ, ಕಾರ್ಪೊರೇಷನವರು, ಸಾರ್ವಜನಿಕ ಆರೋಗ್ಯ ಇಲಾಖೆಯವರು ನೀರನ್ನು ಪರೀಕ್ಷಿಸಿ ಈ ತೀರ್ಮಾನಕ್ಕೆ ಬಂದಿರುವರು. ಬೆಂಗಳೂರು ನಗರದ ಲಕ್ಷಾಂತರ ನಾಗರಿಕರು, ನಗರಕ್ಕೆ ಆಗಮಿಸುವವರು ಈ ಅಶುದ್ಧ ನೀರನ್ನು ಕುಡಿಯುವುದು ಅನಿವಾರ್ಯ. ಈ ನೀರು ಕಾಮಾಲೆ ಮುಂತಾದ ರೋಗಗಳಿಗೆ ಕಾರಣವಾಗಿದೆ.

ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಬೆಂಗಳೂರು ಜಿಲ್ಲಾ ಸಮಿತಿಯ ಕಾರ್ಯಕರ್ತರು ಅಶುದ್ಧ ನೀರಿನ ಪೂರೈಕೆ ಕುರಿತು ನಗರದ ಜಲಮಂಡಲಿ ಕಚೇರಿ ಎದುರು ದಿನಾಂಕ 15-6-81 ರಂದು ಪ್ರತಿಭಟನೆ ನಡೆಸಿ ಮನವಿ ಸಲ್ಲಿಸಿದರು.

ಹಳತಾದ ಕೊಳವೆಗಳನ್ನು ತಕ್ಷಣ ಬದಲಾಯಿಸಬೇಕು, ನೀರು ಸಂಗ್ರಹ ಟ್ಯಾಂಕುಗಳನ್ನು ಶುದ್ಧವಾಗಿಡಬೇಕು, ಪೂರೈಕೆ ಮಾಡುವ ಮುನ್ನ ನೀರನ್ನು ಚೆನ್ನಾಗಿ ಶುದ್ಧೀಕರಿಸಬೇಕು, ಸಾರ್ವಜನಿಕ ನಲ್ಲಿ (ಕೊಳಾಯಿ) ಗಳ ಸಂಖ್ಯೆಯನ್ನು ಹೆಚ್ಚಿಸಬೇಕು......ಈ ಮುಂತಾದ ಬೇಡಿಕೆಗಳಿಗಾಗಿ ಒತ್ತಾಯಿಸಲಾಯಿತು.

ಜಲಮಂಡಳಿಯ ಚೇರ್‌ಮನ್‌ರು ಪ್ರದರ್ಶನಕಾರರ ಮುಖಂಡರಾದ ಕಾಂ. ಅನಂತರಾಮ್, ಶ್ರೀನಿವಾಸ್, ಸುಬ್ರಮಣಿ ಮೊದಲಾದವರನ್ನು ಕರೆಯಿಸಿ ಕುಂದುಕೊರತೆಗಳ ಬಗ್ಗೆ ತೀವ್ರ ಗಮನಕೊಡುವ ಭರವಸೆ ನೀಡಿದರು.

○

# ಎಸ್. ಎಫ್. ಐ. ನ ಸ್ತುತ್ಯ ಕಾರ್ಯ

ವಿದ್ಯಾರ್ಥಿಗಳು ಶಾಲಾ-ಕಾಲೇಜುಗಳಲ್ಲಿ ಫೀ ವಿನಾಯತಿ, ಸೀಟ್ ರಿಜರ್ವೇಶನ್, ಸ್ಕಾಲರ್‌ಶಿಪ್ ಮೊದಲಾದ ಸವಲತ್ತುಗಳನ್ನು ಪಡೆಯುವುದಕ್ಕಾಗಿ ಕೊಡಬೇಕಾಗಿರುವ ಅರ್ಜಿ ಫಾರ್ಮ್, ಅಫಿಡವಿಟ್ ಮೊದಲಾದವುಗಳನ್ನು ಉಚಿತವಾಗಿ ಬರೆದುಕೊಡುವ ಕಾರ್ಯಕ್ರಮದಂತೆ ಎಸ್. ಎಫ್. ಐ.ನ ದ. ಕ. ಜಿಲ್ಲಾಸಮಿತಿಯ ಮತಿಯಿಂದ 1300ಕ್ಕೂ ಮಿಕ್ಕಿ ವಿದ್ಯಾರ್ಥಿಗಳಿಗೆ ಅರ್ಜಿ ಫಾರಂಗಳನ್ನು ಉಚಿತವಾಗಿ ಬರೆದುಕೊಡಲಾಯಿತು.

ಒಂದು ಅರ್ಜಿ ಮತ್ತು ಅದಕ್ಕೆ ಬೇಕಾಗಿರುವ ಅಫಿಡವಿಟ್‌ಗಳನ್ನು ಬರೆಸುವುದಕ್ಕಾಗಿ ವಿದ್ಯಾರ್ಥಿಗಳು ಕನಿಷ್ಠ 10 ರೂ. ಖರ್ಚುಮಾಡಬೇಕಾಗುತ್ತಿತ್ತು. ಎಸ್. ಎಫ್. ಐ. ಕಾರ್ಯಕರ್ತರು ಅರ್ಜಿಗಳನ್ನು ಬರೆದುಕೊಡುವುದರೊಟ್ಟಿಗೆ ವಿದ್ಯಾರ್ಥಿಗಳಿಗೆ, ಪೋಷಕರಿಗೆ ಮಾರ್ಗದರ್ಶನ ಕೊಟ್ಟರು.

ಎಸ್. ಎಫ್. ಐ. ಕಾರ್ಯಕರ್ತರ ಈ ಕಾರ್ಯ ಸಾರ್ವಜನಿಕರಿಂದ ಪ್ರಶಂಸೆಗಳಿಸಿತು. ಕಾರ್ಯಕ್ರಮದಲ್ಲಿ ಸಹಕರಿಸಿದ ಸಾರ್ವಜನಿಕರಿಗೆ ಮತ್ತು ಹಿತೈಷಿಗಳಿಗೆ ಎಸ್. ಎಫ್. ಐ. ಜಿಲ್ಲಾ ಸಮಿತಿಯ ಪರವಾಗಿ ಕಾಂ. ಉಮೇಶ್ ಭಂಡಾರಿ ಕೃತಜ್ಞತೆ ಸೂಚಿಸಿದ್ದಾರೆ.

○

# ಆಟೋ ಚಾಲಕರ ಮತ ಪ್ರದರ್ಶನ

ಆಟೋಚಾಲಕರಿಗೆ ಆರ್. ಟಿ. ಓ. ಕಚೇರಿಯಲ್ಲಿ ಆಗುತ್ತಿರುವ ಅನ್ಯಾಯಗಳನ್ನು ಪ್ರತಿಭಟಿಸಿ ಬೆಂಗಳೂರಿನ ಆರ್. ಟಿ. ಓ. ಕಚೇರಿ ಎದುರು ಆಟೋಚಾಲಕರು ಮತಪ್ರದರ್ಶನ ನಡೆಸಿದರು.

ಅನಿರೀಕ್ಷಿತವಾಗಿ ನಡೆದ ಮತಪ್ರದರ್ಶನದಿಂದ ಕಂಗಾಲಾದ ಅಧಿಕಾರಿಗಳು ಪ್ರದರ್ಶನಕಾರರ ಮುಖಂಡರನ್ನು ಮಾತುಕತೆಗೆ ಆಹ್ವಾನಿಸಿದರು. ಆಟೋಚಾಲಕರ ಸಂಘದ ಪ್ರಧಾನ ಕಾರ್ಯದರ್ಶಿ ಕಾಂ. ಎ.ವಿ. ರಮೇಶ, ಉಪಾಧ್ಯಕ್ಷ ಕಾಂ. ಸುಬ್ಬರಾವ್, ಖಜಾಂಚಿ ನಾಗರಾಜ್ ಇವರುಗಳು ಚಾಲಕರಿಗೆ ಆಗುತ್ತಿರುವ ಅನ್ಯಾಯವನ್ನು, ತೊಂದರೆಗಳನ್ನು ಅಧಿಕಾರಿಗಳ ಗಮನಕ್ಕೆ ತಂದು ಬೇಡಿಕೆಗಳನ್ನೊಳಗೊಂಡ ಮನವಿಪತ್ರ ಅರ್ಪಿಸಿದರು.

ಪರ್ಮಿಟ್ ಕೊಡುವುದರಲ್ಲಿ ನಡೆಯುತ್ತಿರುವ ಅವ್ಯವಸ್ಥೆಯನ್ನು ಸರಿಪಡಿಸುವುದು, ಕಚೇರಿಗೆ ಕಾರ್ಯನಿಮಿತ್ತ ಬರುವ ಆಟೋಚಾಲಕರ ಸುಲಿಗೆ ನಿಲ್ಲಬೇಕು, ಆಟೋಚಾಲಕರಿಗೆ ಆರ್. ಟಿ. ಓ. ಕಚೇರಿಯಲ್ಲಿ ಮಾರ್ಗದರ್ಶನ ಮಾಡಲು ಸಂಘದ ಪ್ರತಿನಿಧಿಗೆ ಮಾನ್ಯತೆ ಕೊಡಬೇಕು...ಇವೇ ಮೊದಲಾದ ಬೇಡಿಕೆಗಳು ಮನವಿಪತ್ರದಲ್ಲಿದ್ದವು.

ಬೇಡಿಕೆಗಳನ್ನು ಪರಿಶೀಲಿಸಿದ ಆರ್ ಟಿ. ಓ. ಶ್ರೀ ದೇವಯ್ಯ ತೊಂದರೆಗಳನ್ನು ಪರಿಹರಿಸುವ ಆಶ್ವಾಸನೆ ನೀಡಿದರು.

ನಂತರ ಪ್ರದರ್ಶನಕಾರರನ್ನುದ್ದೇಶಿಸಿ ಕಾಂ. ರಮೇಶ್ ಮಾತನಾಡಿದರು.

●

# ಬರಗಾಲ ಕಾಮಗಾರಿಯಲ್ಲಿ ಕರಾಮತ್ತು

ಕೋಲಾರ ಜಿಲ್ಲೆಯ ರೈತ ಕೂಲಿಕಾರರು ಗುಂಡೇಟು ತಿಂದು ಅನವರತ ಹೋರಾಟ ಮಾಡಿದ್ದರಿಂದ ಬರಗಾಲ ಕಾಮಗಾರಿ ಯೋಜನೆಗೆ ಸುಮಾರು ಒಂದು ಕೋಟಿಗೂ ಮಿಕ್ಕ ಹಣ ಮಂಜೂರಾಗಿತ್ತು. 'ದೇವರು ವರಕೊಟ್ಟರೂ-ಪೂಜಾರಿ ಕೊಡಲಿಲ್ಲ' ಎಂಬ ನಾಣ್ಣುಡಿಯಂತೆ ಪಿ.ಡಬ್ಲ್ಯು.ಡಿ. ಅಧಿಕಾರಿಗಳು ಮತ್ತು ಕಂಟ್ರಾಕ್ಟ್‌ದಾರರು ನಡೆಸುತ್ತಿರುವ ವಂಚನೆಯಿಂದ ಕೂಲಿಕಾರರಿಗೆ ಶ್ರಮಕ್ಕೆ ನಾಮ ಬೀಳತೊಡಗಿದೆ. ಬೆವರು ಸುರಿಸಿ ಕೆಲಸಮಾಡುವ ಕೂಲಿಕಾರರಿಗೆ ಸರಿಯಾಗಿ ಕೂಲಿ ದೊರೆಯುತ್ತಿಲ್ಲ.

ದಿನಕ್ಕೆ 9 ರಿಂದ 10 ಘಂಟೆಯವರೆಗೂ ಶ್ರಮವಹಿಸುವ ಕೂಲಿಕಾರರಿಗೆ ಈಗ ದೊರೆಯುತ್ತಿರುವ ಕೂಲಿ 4ರೂ. ಮಾತ್ರ. ಮೇಲಧಿಕಾರಿಗಳು ಬಂದು ವಿಚಾರಿಸಿದಲ್ಲಿ 5 ರೂ. ಕೂಲಿ ದೊರಕುತ್ತಿದೆಯೆಂದು ಉತ್ತರಿಸಬೇಕೆಂದು ಆದೇಶ ಅಧಿಕಾರಿಗಳ ಏಜೆಂಟರದು. ಇಲ್ಲವಾದಲ್ಲಿ ಕೆಲಸದಿಂದ ಹೊರದೂಡಲಾಗುವುದು.

ತಲೆಗೊಂದು ರೂಪಾಯಿ ಹಿಡಿದುಕೊಳ್ಳುತ್ತಿರುವುದು ಮೇಲಧಿಕಾರಿಗಳಿಗೆ ಕೊಡಬೇಕಾಗಿರುವ 'ಸಂಭಾವನೆ' ಯೆಂದು ಏಜೆಂಟರ ಹೇಳಿಕೆ. ಕೂಲಿಕಾರರಿಗೆ ದಿನಕ್ಕೊಮ್ಮೆ ಕೂಲಿ ನೀಡದೆ ವಾರಕ್ಕೊಮ್ಮೆ ಅಥವಾ ಇನ್ನೂ ತಡವಾಗಿ ನೀಡುತ್ತಾರೆ. ಕೂಲಿ ಪಡೆಯಲು ಅಧಿಕಾರಿಗಳ ಮನೆಮುಂದೆ ಅಧಿಕ ಸಮಯ ಕಾಯಬೇಕಾಗುತ್ತದೆ. ಕೆಲಸ ನಡೆಯದಿರುವ ದಿನದಂದು ಸಹಾ ಕೆಲಸ ನಡೆದಿದೆ ಎಂಬ ದಾಖಲಾತಿ ಸೃಷ್ಟಿಸಿ ಹಣ ಲಪಟಾಯಿಸುತ್ತಾರೆ. ಹಾಜರಿ ಪುಸ್ತಕದಲ್ಲಿ ಒಂದಕ್ಕೆ ಎರಡರಷ್ಟು ಜನರನ್ನು ನಮೂದಿಸಿ ಮಂಜೂರಿಸಿದ ಹಣದಲ್ಲಿ ಅಧಿಕಾರಿಗಳು, ಕಂಟ್ರಾಕ್ಟರುಗಳು ಪರ್‌ಸೆಂಟೇಜ್ ಲೆಕ್ಕದಲ್ಲಿ ಭಾಗ ಮಾಡಿಕೊಳ್ಳುತಾರೆ.

ದಿನವಿಡೀ ಕಷ್ಟಪಡುವ ಕೂಲಿಕಾರನಿಗೆ 4ರೂ. ಸಿಗುವುದು. ಭ್ರಷ್ಟ ಅಧಿಕಾರಿಗಳು ಮತ್ತು ಅವರ ಚಮಚಾಗಳಿಗೆ ನೂರಾರು ರೂಪಾಯಿ ಸಿಕ್ಕುತ್ತಿದೆ. ಇದಲ್ಲದೇ ಕಂಟ್ರಾಕ್ಟ್‌ದಾರರು ಸದರಿ ಕೂಲಿಕಾರರನ್ನು ಸರಕಾರ ನೀಡುವ ಕೂಲಿಯ ಮತಿಯಿಂದಲೇ ತಮ್ಮ ಸ್ವಂತ ಕೆಲಸಗಳನ್ನೂ ಮಾಡಿಸಿಕೊಳ್ಳುತ್ತಾರೆ. ಕೆಲಸಮಾಡದಿದ್ದಲ್ಲಿ ಉದ್ಯೋಗ ಹೋಗುವುದೆಂಬ ಭಯದಿಂದ ಕೂಲಿಕಾರರು ಬೆದರುತ್ತಾರೆ. ಈ ಭ್ರಷ್ಟರನ್ನು ಧಿಕ್ಕರಿಸಿದರೆ ಹೆಂಡತಿ-ಮಕ್ಕಳು ಉಪವಾಸ ಬೀಳಬೇಕಾಗಿಬರಬಹುದೆಂಬ ಹೆದರಿಕೆ.

ಇದು ಜಿಲ್ಲೆಯ ಶ್ರಮಜೀವಿಗಳನ್ನು ಶೋಷಿಸುತ್ತಿರುವ ಕರ್ಮಕಾಂಡದ ಕತೆ. ರೈತಕೂಲಿಕಾರರ ರಕ್ತ ಹೀರುತ್ತಿರುವ ಶೋಷಕರನ್ನು ಮಟ್ಟಹಾಕಬೇಕಾದರೆ ಬಡರೈತ ಕೂಲಿಕಾರರ ಸಂಘಟಿತ ಪ್ರಯತ್ನದಿಂದ ಮಾತ್ರ ಸಾಧ್ಯ.

●

## ಆರ್ಥಿಕ ಸಮೀಕ್ಷೆ :

# ಬಡತನ ಮತ್ತು ಜನಸಂಖ್ಯೆ

ಆರ್. ಚಂದ್ರ

### ೬೮೩ ಮಿಲಿಯ ಜನಸಂಖ್ಯೆ:

1981ರಲ್ಲಿ ನಡೆದ ಭಾರತದ ಜನಗಣನೆಯ ಫಲಿತಾಂಶ ಈಗ ಪ್ರಕಟಗೊಂಡಿದೆ. ಕಳೆದ ಒಂದು ದಶಕದಲ್ಲಿ (1971-81) ನಮ್ಮ ದೇಶದ ಜನಸಂಖ್ಯೆಯು 549 ಮಿಲಿಯದಿಂದ 683 ಮಿಲಿಯಕ್ಕೇರಿತು. ಅಂದರೆ, 136 ಮಿಲಿಯದಷ್ಟು, ಪ್ರಪಂಚದ 5ನೇ ದೊಡ್ಡ ದೇಶದಷ್ಟು, ಜನಸಂಖ್ಯೆ ನಮ್ಮ ದೇಶದಲ್ಲಿ ಕಳೆದ ಹತ್ತು ವರ್ಷಗಳಲ್ಲಿ ಹೆಚ್ಚಾಯಿತು! 1947ರಲ್ಲಿ ನಮ್ಮ ಜನಸಂಖ್ಯೆಯು 336 ಮಿಲಿಯದಷ್ಟಿದ್ದು, ಈಗ ಅದರ ಎರಡು ಪಾಲಿಗಿಂತಲೂ ಹೆಚ್ಚಿದೆ. 1961-71ರ ದಶಕದಲ್ಲಿ ಜನಸಂಖ್ಯೆ ಹೆಚ್ಚಳದ ದರವು ಶೇ. 24.80ರಷ್ಟಾಗಿದ್ದು, 1971-81ರ ದಶಕದಲ್ಲಿ ಈ ದರವು 24.75 ರಷ್ಟಾಗಿತ್ತು. ಅಂದರೆ, ಜನಸಂಖ್ಯಾ ನಿಯಂತ್ರಣದ ಕಾರ್ಯಕ್ರಮಗಳೆಲ್ಲವೂ ವಿಫಲವಾದವು. ಜನಸಂಖ್ಯೆಯಲ್ಲಿ ನಮ್ಮ ದೇಶ ಜಗತ್ತಿನ ಎರಡನೇ ದೊಡ್ಡ ದೇಶವಾಗಿದೆ. 957 ಮಿಲಿಯ ಜನಸಂಖ್ಯೆ ಇರುವ ಚೀನಾ ಪ್ರಥಮ ಸ್ಥಾನ ಪಡೆದಿದೆ. 267 ಮಿಲಿಯ ಜನಸಂಖ್ಯೆ ಇರುವ ಸೋವಿಯತ್ ರಷ್ಯಾ ಮೂರನೇ ಸ್ಥಾನವನ್ನೂ, 222 ಮಿಲಿಯ ಜನಸಂಖ್ಯೆ ಇರುವ ಅಮೇರಿಕ (USA) ನಾಲ್ಕನೇ ಸ್ಥಾನವನ್ನೂ ಪಡೆದಿದೆ. ಪ್ರಪಂಚದ ಒಟ್ಟು 4405 ಮಿಲಿಯ ಜನಸಂಖ್ಯೆಯಲ್ಲಿ ಚೀನಾ, ಭಾರತ, ಸೋವಿಯತ್ ರಷ್ಯಾ ಮತ್ತು ಅಮೇರಿಕಾ ದೇಶಗಳ ಪಾಲು ಶೇ. 50ರ ಸಮೀಪವಿರುವುದನ್ನು ಗಮನಿಸಬೇಕು.

### ಜನಸಂಖ್ಯೆ ಮತ್ತು ಆದಾಯ :

ಜಗತ್ತಿನ 126 ಆಯ್ದ ದೇಶಗಳಲ್ಲಿ ಈ ನಾಲ್ಕು ದೇಶಗಳ ಜನರ ಸರಾಸರಿ ವಾರ್ಷಿಕ ವರಮಾನ, ಜನಸಂಖ್ಯೆ ಹೆಚ್ಚಳದ ದರ ಇತ್ಯಾದಿಗಳ ತುಲನಾತ್ಮಕ ವಿವರಗಳನ್ನು ಈ ಕೆಳಗೆ ಕೊಡಲಾಗಿದೆ.

| | | | 1965-74 ರಲ್ಲಿ | |
|---|---|---|---|---|
| ದೇಶಗಳು | 1975 ರಲ್ಲಿ ಸರಾಸರಿ ವಾರ್ಷಿಕ ವರಮಾನ | 126 ದೇಶಗಳಲ್ಲಿನ ಸ್ಥಾನ | ಸರಾಸರಿ ವಾರ್ಷಿಕ ವರಮಾನ ಹೆಚ್ಚಳದ ದರ | ವಾರ್ಷಿಕ ಜನಸಂಖ್ಯೆ ಹೆಚ್ಚಳದ ದರ |
| ಅಮೇರಿಕ | $ 6670 | 3ನೇ ಸ್ಥಾನ | 2.4% | 1.0% |
| ರಷ್ಯಾ | $ 2380 | 25ನೇ ಸ್ಥಾನ | 3.4% | 1.0% |
| ಚೀನಾ | $ 300 | 84ನೇ ಸ್ಥಾನ | 4.6% | 1.7% |
| ಭಾರತ | $ 140 | 100ನೇ ಸ್ಥಾನ | 1.3% | 2.3% |
| | | | | (1971-81 : 2.475%) |

ಇದರಿಂದ ತಿಳಿದುಬರುವುದೇನೆಂದರೆ, ಪ್ರಪಂಚದ ಅತ್ಯಂತ ಜನನಿಬಿಡವಾದ ನಾಲ್ಕು ದೇಶಗಳಲ್ಲಿ, ಅಮೇರಿಕದಂತಹ ಮುಂದುವರಿದ ಬಂಡವಾಳಶಾಹಿ ರಾಷ್ಟ್ರದಲ್ಲಿಯೂ, ರಷ್ಯಾದಂತಹ ಮುಂದುವರಿದ ಸಮಾಜವಾದಿ ರಾಷ್ಟ್ರದಲ್ಲಿಯೂ, ಚೀನಾದಂತಹ ಅಭಿವೃದ್ಧಿ ಹೊಂದುತ್ತಿರುವ ಸಮಾಜವಾದಿ ರಾಷ್ಟ್ರದಲ್ಲಿಯೂ ಜನಸಂಖ್ಯೆ ಹೆಚ್ಚಳದ ದರವು ಮಂದಗತಿಯಲ್ಲಿದ್ದು, ಜನರ ಸರಾಸರಿ ವಾರ್ಷಿಕ ವರಮಾನ ಹೆಚ್ಚಳದ ದರವು ಏರಿಕೆಯಲ್ಲಿದೆ. ಆದರೆ, ಭಾರತದಂತಹ ಅಭಿವೃದ್ಧಿ ಹೊಂದುತ್ತಿರುವ ಬಂಡವಾಳಶಾಹಿ ರಾಷ್ಟ್ರದಲ್ಲಿ ಜನಸಂಖ್ಯೆ ಹೆಚ್ಚಳದ ದರವು ಹೆಚ್ಚಾಗಿದ್ದು, ಜನರ ಸರಾಸರಿ ವಾರ್ಷಿಕ ವರಮಾನ ಹೆಚ್ಚಳದ ದರವು ಕಡಿಮೆಯಾಗಿದೆ, ಹಿಂದುಳಿದಿದೆ. ಇದರಿಂದಾಗಿ ಜನಸಂಖ್ಯೆಗೂ ಆರ್ಥಿಕ ಅಭಿವೃದ್ಧಿಗೂ ನಿಕಟ ಸಂಬಂಧವಿರುವುದನ್ನು ಗಮನಿಸಬಹುದು.

### ಅಮೇರಿಕಾ

ಅಮೇರಿಕವು ಜಗತ್ತಿನಲ್ಲಿ ಮೂರನೇ ಶ್ರೀಮಂತ ರಾಷ್ಟ್ರವಾಗಬೇಕಾದರೆ, 200 ವರ್ಷಗಳಿಂದ ಬಂಡವಾಳಶಾಹಿ ಮಾರ್ಗವನ್ನವಲಂಬಿಸಬೇಕಾಯಿತು. ಎರಡು ಜಾಗತಿಕ ಯುದ್ಧಗಳಲ್ಲಿ ಸಾಮ್ರಾಜ್ಯಶಾಹಿ ರಾಷ್ಟ್ರಗಳ ಮಧ್ಯಸ್ಥಿಕೆವಹಿಸಿ, ನಾಯಕತ್ವ ವಹಿಸಿ, ಅಪಾರ ಸಂಪತ್ತು ಗಿಟ್ಟಿಸಿಕೊಳ್ಳಬೇಕಾಯಿತು. ಅಭಿವೃದ್ಧಿ ಹೊಂದುತ್ತಿರುವ ದೇಶಗಳನ್ನು ತನ್ನ ಸಾಲ ಸಹಾಯಗಳಿಂದ-ಹೊಸ ವಸಾಹತುವಾದದಿಂದ ಕೊಳ್ಳೆಹೊಡೆಯಬೇಕಾಯಿತು. ಆದರೆ, ಈಗ ವಿದೇಶಿ ಮಾರುಕಟ್ಟೆಯು ಕುಸಿತದಿಂದಾಗಿ, ಆರ್ಥಿಕ ಅಭಿವೃದ್ಧಿಗಿಂತ ಯುದ್ಧ ಸಿದ್ಧತೆಗೆ ಹೆಚ್ಚು ಆದ್ಯತೆ ಕೊಡುವುದರಿಂದಾಗಿ, ಹಣದುಬ್ಬರ, ನಿರುದ್ಯೋಗ, ಆರ್ಥಿಕ ಹಿಂಜರಿತ, ಇತ್ಯಾದಿ ತೀವ್ರ ದುಃಸ್ಥಿತಿಗಳನ್ನು ಎದುರಿಸುತ್ತಿದೆ. ಇಲ್ಲಿನ ಜನರ ಸರಾಸರಿ ವಾರ್ಷಿಕ ಆದಾಯವು ಮೇಲ್ಮಟ್ಟದಲ್ಲಿದ್ದರೂ ಅವರೊಳಗಿನ ಆಸ್ತಿ ಆದಾಯಗಳ ಹಂಚುವಿಕೆಯಲ್ಲಿ ಅಪಾರ ಅಸಮಾನತೆ ಇದೆ. ರಾಷ್ಟ್ರೀಯ ಆದಾಯ ಹೆಚ್ಚಳದ ದರವು ಸ್ಥಗಿತಗೊಳ್ಳುತ್ತಿದೆ. ಮಂದಗತಿಯಲ್ಲಿ ಏರುತ್ತಿರುವ ಜನಸಂಖ್ಯೆಗೆ ಸರಿಯಾಗಿಯೂ ಅವರ ವರಮಾನ ಏರಲು ಅಸಾಧ್ಯವಾಗುತ್ತಿದೆ.

### ರಷ್ಯಾ

ಸೋವಿಯತ್ ರಷ್ಯಾದಲ್ಲಿ ಕ್ರಾಂತಿಯಾಗಿ ಸಮಾಜವಾದಿ ಮಾರ್ಗವನ್ನು ಅವಲಂಬಿಸುತ್ತಾ ಬಂದುದರಿಂದಲೇ, ಅದು 60 ವರ್ಷಗಳಲ್ಲಿಯೇ ಜಗತ್ತಿನ ಶ್ರೀಮಂತ ರಾಷ್ಟ್ರಗಳಲ್ಲಿ 25ನೇ ಸ್ಥಾನ ಪಡೆಯಲು ಸಾಧ್ಯವಾಯಿತು. ವಿಜ್ಞಾನ, ತಂತ್ರಜ್ಞಾನ, ಮಿಲಿಟರಿ, ಆರ್ಥಿಕ ಸ್ಥಿರತೆ, ಇತ್ಯಾದಿ ವಿಷಯಗಳಲ್ಲಿ ಅಮೇರಿಕವನ್ನೂ ಮೀರಲು ಸಾಧ್ಯವಾಯಿತು. ಎರಡು ಜಾಗತಿಕ ಯುದ್ಧಗಳಿಂದಾಗಿ ರಷ್ಯಾ ದೇಶವು ಅಪಾರ ಕಷ್ಟನಷ್ಟಗಳಿಗೊಳಗಾಗಿದ್ದರೂ, ಕ್ರಾಂತಿಯ ನಂತರ ದೀರ್ಘಕಾಲ ಆರ್ಥಿಕ ದಿಗ್ಬಂಧನಕ್ಕೊಳಗಾಗಿದ್ದರೂ, ತನ್ನ 60 ವರ್ಷಗಳ ಸಮಾಜವಾದಿ ಮಾರ್ಗದಲ್ಲಿ ಸಾಧಿಸಿದ ಪ್ರಗತಿಯು ಅದ್ಭುತವಾಗಿದೆ. ಸಾಮ್ರಾಜ್ಯಶಾಹಿ ಹಾಗೂ ಹೊಸ ವಸಾಹತುವಾದದ ವಿರುದ್ಧ ಜಾಗತಿಕ ಹೋರಾಟದಲ್ಲಿ ರಷ್ಯಾ ಮುಂಚೂಣಿ ಸ್ಥಾನದಲ್ಲಿದೆ. ಇಲ್ಲಿ ಅನಕ್ಷರಸ್ಥರಿಲ್ಲ, ನಿರುದ್ಯೋಗಿಗಳಿಲ್ಲ, ಬೆಲೆ ಏರಿಕೆ ಹಣದುಬ್ಬರಗಳಿಲ್ಲ. ಆರ್ಥಿಕ ಏರುಪೇರು ಮುಂತಾದ ಅನಾಹುತಗಳಿಲ್ಲ. ಇಲ್ಲಿನ ಜನರ ಸರಾಸರಿ ವಾರ್ಷಿಕ ವರಮಾನವು ಅಮೇರಿಕದಂತಹ ಮುಂದುವರಿದ ಬಂಡವಾಳಶಾಹಿರಾಷ್ಟ್ರಗಳಿಗಿಂತ ಕಡಿಮೆಯಾಗಿದ್ದರೂ, ಜನರ ಜೀವನಮಟ್ಟದ ಅಂತರ 1 : 4ರಷ್ಟಾಗಿದ್ದು, ಅಸಮಾನತೆ ಅತ್ಯಲ್ಪವಾಗಿದೆ. ಹೀಗಾಗಿ, ಆರ್ಥಿಕ ಅಭಿವೃದ್ಧಿಯ ದರವೂ, ಜನರ ಸರಾಸರಿ ವಾರ್ಷಿಕ ಆದಾಯ ಹೆಚ್ಚಳದ ದರವೂ ಹೆಚ್ಚುತ್ತಲೇ ಇದೆ. ಜನಸಂಖ್ಯೆ ಹೆಚ್ಚಳದ ದರವು ಕಡಿಮೆಯಾಗುತ್ತಲೇ ಇದೆ.

### ಚೀನಾ

ಭಾರತ ದೇಶಕ್ಕಿಂತಲೂ ಹಿಂದುಳಿದಿದ್ದ ಚೀನಾ ದೇಶದಲ್ಲಿಯೂ ಕ್ರಾಂತಿಯಾಗಿ ಸಮಾಜವಾದಿ ಮಾರ್ಗವನ್ನು ಅನುಸರಿಸಿಕೊಂಡು ಬಂದುದರಿಂದ, 30 ವರ್ಷಗಳಲ್ಲಿಯೇ ಭಾರತಕ್ಕಿಂತಲೂ ಹೆಚ್ಚಿನ ಆರ್ಥಿಕ ಅಭಿವೃದ್ಧಿಯನ್ನು ಸಾಧಿಸಲಾಯಿತು. ಇಲ್ಲಿ ನಿರುದ್ಯೋಗ, ಬೆಲೆಏರಿಕೆ, ಹಣದುಬ್ಬರ, ಅನಕ್ಷರತೆ, ಬಡತನ, ದಾರಿದ್ರ್ಯ ಇತ್ಯಾದಿ ಸಮಸ್ಯೆಗಳಿಲ್ಲ. ಚೀನಾದಲ್ಲಿ ವ್ಯವಸಾಯಯೋಗ್ಯವಾದ ಭೂಮಿಯು ಭಾರತಕ್ಕಿಂತಲೂ ಕಡಿಮೆಯಾಗಿದ್ದರೂ, ಅಲ್ಲಿನ ವಾರ್ಷಿಕ ಆಹಾರಧಾನ್ಯಗಳ ಉತ್ಪಾದನೆ 332 ಮಿಲಿಯಟನ್ನುಗಳಷ್ಟಾಗಿದೆ. ಈ ದೇಶದ ಜನರ ಸರಾಸರಿ ವಾರ್ಷಿಕ ವರಮಾನ ನಮ್ಮ ಜನರ ಸರಾಸರಿ ವರಮಾನದ ಎರಡರಷ್ಟಕ್ಕಿಂತಲೂ ಹೆಚ್ಚಾಗಿದೆ. ಜನರ ಜೀವನಮಟ್ಟದ ಅಂತರ 1 : 3ರಷ್ಟಾಗಿದ್ದು, ಆಸ್ತಿ ಆದಾಯಗಳ ವಿತರಣೆಯಲ್ಲಿ ಅಸಮಾನತೆ ಅತ್ಯಲ್ಪವಾಗಿದೆ. ಚೀನಾ ಎರಡನೇ ಜಾಗತಿಕ ಯುದ್ಧದಿಂದಲೂ, ನಂತರದ ಆಂತರಿಕ ಯುದ್ಧದಿಂದಲೂ ಜರ್ಝರಿತವಾಗಿತ್ತು. ಮುಂದೆ ದೀರ್ಘಕಾಲದವರೆಗೆ ಅಮೇರಿಕ ಮೊದಲಾದ ಬಂಡವಾಳಶಾಹಿ ರಾಷ್ಟ್ರಗಳಿಂದ ಆರ್ಥಿಕ ದಿಗ್ಬಂಧನಕ್ಕೊಳಗಾಗಿತ್ತು. ಅಷ್ಟೆಲ್ಲಾ ಅಡೆತಡೆಗಳನ್ನು ಎದುರಿಸಿಕೊಂಡು ಮೂರು ದಶಕಗಳಲ್ಲಿಯೇ ಸ್ವಾವಲಂಬಿಯಾಗಿ ಬಲಿಷ್ಠ ರಾಷ್ಟ್ರವಾಗಿದೆ. ಇಲ್ಲಿ ಜನಸಂಖ್ಯೆ ಹೆಚ್ಚಳದ ದರವು ಮಂದಗತಿಯಲ್ಲಿದೆ. ಜನರ ವಾರ್ಷಿಕ ವರಮಾನ ಹೆಚ್ಚಳದ ದರವು ಏರಿಕೆಯಲ್ಲಿದ.

### ಭಾರತ

ಭಾರತದ ಜನಸಂಖ್ಯೆಯು ಪ್ರಪಂಚದ ಒಟ್ಟು ಜನಸಂಖ್ಯೆಯ ಶೇ. 15ರಷ್ಟು ಆಗಿದ್ದರೂ, ಅದರ ಆದಾಯವು ಪ್ರಪಂಚದ ಆದಾಯದ ಶೇ. 2.4ರಷ್ಟೇ ಆಗಿರುವುದು ಶೋಚನೀಯ. ವೈಯಕ್ತಿಕ ವಾರ್ಷಿಕ ಸರಾಸರಿ ಆದಾಯದ ಮಟ್ಟದಲ್ಲಿ ಭಾರತವು ಜಗತ್ತಿನ 126 ದೇಶಗಳಲ್ಲಿ 104ನೇ ಸ್ಥಾನದಲ್ಲಿದೆ. ಚೀನಾ 84ನೇ ಸ್ಥಾನದಲ್ಲಿದೆ. ಚೀನಾದಲ್ಲಿ ಮೊದಲೇ ತಿಳಿಸಿದಂತೆ, 957 ಮಿಲಿಯ ಜನಸಂಖ್ಯೆಗೆ 330 ಮಿಲಿಯ ಟನ್ ಆಹಾರಧಾನ್ಯಗಳ ಉತ್ಪಾದನೆ ಆಗುತ್ತಿದೆ. ರಷ್ಯಾದಲ್ಲಿ 267 ಮಿಲಿಯ ಜನಸಂಖ್ಯೆಗೆ 205 ಮಿಲಿಯ ಟನ್ ಆಹಾರಧಾನ್ಯಗಳ ಉತ್ಪಾದನೆ ಆಗುತ್ತಿದೆ. ಭಾರತದಲ್ಲಿ 684 ಮಿಲಿಯ ಜನಸಂಖ್ಯೆಗೆ 132 ಮಿಲಿಯ ಟನ್‌ಗಳಷ್ಟೇ ಆಹಾರ ಧಾನ್ಯಗಳ ಉತ್ಪಾದನೆ ಆಗುತ್ತಿದೆ. ಮೂವತ್ತು ವರ್ಷಗಳ ಅವಧಿಯ ಆರ್ಥಿಕ ಅಭಿವೃದ್ಧಿಯ ನಂತರವೂ, ಜಗತ್ತಿನ ಎಲ್ಲಾ ಸಮಾಜವಾದಿ ರಾಷ್ಟ್ರಗಳ ಹಾಗೂ ಬಂಡವಾಳಶಾಹಿ ರಾಷ್ಟ್ರಗಳ ನಿರಂತರ ನೆರವು ಪಡೆದ ನಂತರವೂ, ನಮ್ಮ ಜನಸಂಖ್ಯೆಯ ಶೇ. 64ರಷ್ಟು ಜನರು ಅನಕ್ಷರಸ್ಥರಾಗಿದ್ದಾರೆ, ಶೇ. 48ರಷ್ಟು ಕಡುಬಡವರೂ, ದಟ್ಟದರಿದ್ರರೂ ಆಗಿದ್ದಾರೆ. 16 ಮಿಲಿಯ ನಿರುದ್ಯೋಗಿಗಳು ಉದ್ಯೋಗ ವಿನಿಮಯಗಳಲ್ಲಿ ಕೆಲಸಕ್ಕಾಗಿ ಕಾದುಕೂತಿದ್ದಾರೆ. ಗ್ರಾಮೀಣ ಪ್ರದೇಶಗಳಲ್ಲಿ 34 ಮಿಲಿಯ ನಿರುದ್ಯೋಗಿಗಳೂ ಅರೆ ಉದ್ಯೋಗಿಗಳೂ ಜೀವನದ ಉಸಿರು ಉಳಿಸಿಕೊಳ್ಳಲು ಒದ್ದಾಡುತ್ತಿದ್ದಾರೆ. ಆಸ್ತಿ ಆದಾಯಗಳ ಹಂಚುವಿಕೆಯಲ್ಲಿ ಅಪಾರ ಅಸಮಾನತೆ ಇದೆ. ಜನಸಂಖ್ಯೆಯ ಹೆಚ್ಚಳದ ದರವು ಏರಿಕೆಯಲ್ಲಿಯೇ ಇದೆ. ಹೀಗೇಕೆ?

### ಬಡತನಕ್ಕೆ ಜನಸಂಖ್ಯೆ ಹೆಚ್ಚಳ ಕಾರಣವೇ ?

ನಮ್ಮ ಜನರ ಬಡತನ, ನಿರುದ್ಯೋಗ, ಅಸಮಾನತೆ, ಇತ್ಯಾದಿಗಳಿಗೆ ಜನಸಂಖ್ಯೆ ಹೆಚ್ಚಳವೇ ಕಾರಣ ಎಂದು ಪ್ರಧಾನ ಮಂತ್ರಿ ಇಂದಿರಾ ಗಾಂಧಿಯಿಂದ ಹಿಡಿದು ಅನೇಕ ರಾಜಕಾರಣಿಗಳೂ, ಆರ್ಥಿಕ ತಜ್ಞರೂ, ಸಾಮಾಜಿಕ ಕಾರ್ಯಕರ್ತರೂ ವಾದಿಸುತ್ತಿದ್ದಾರೆ. ಜನಸಂಖ್ಯೆಯನ್ನು ಪರಿಣಾಮಕಾರಿಯಾಗಿ ನಿಯಂತ್ರಿಸದೇ ಇದ್ದರೆ, ಬಡತನ ಹೋಗಲಾರದು ಎಂದು ವಾದಿಸುತ್ತಿದ್ದಾರೆ. ಜನಸಂಖ್ಯೆ ಹೆಚ್ಚಳವೇ ನಮ್ಮ ಬಡತನ ದಾರಿದ್ರ್ಯಗಳಿಗೆ ಕಾರಣವಾಗಿದ್ದರೆ, ಜನಸಾಂದ್ರತೆ ವಿರಳವಾಗಿರುವ ಆಫ್ರಿಕದ, ಲ್ಯಾಟಿನ್ ಅಮೇರಿಕಾದ ಕೆಲವು ದೇಶಗಳು ನಮ್ಮ ದೇಶಕ್ಕಿಂತ ಹೆಚ್ಚು ಶ್ರೀಮಂತವಾಗಿರಬೇಕಿತ್ತು. ಆದರೆ, ಅವುಗಳು ನಮ್ಮ ದೇಶಕ್ಕಿಂತಲೂ ಬಡರಾಷ್ಟ್ರಗಳಾಗಿವೆ. ಹಾಗೆಯೇ, ಭಾರತದ ಜನಸಾಂದ್ರತೆಗಿಂತ ಜರ್ಮನಿ, ಹೊಲ್ಯಾಂಡ್, ಜಪಾನ್, ಇಂಗ್ಲೆಂಡ್, ಶ್ರೀಲಂಕಾ, ಬಾಂಗ್ಲಾ ದೇಶಗಳ ಜನಸಾಂದ್ರತೆ ಹೆಚ್ಚಾಗಿದೆ. ಭಾರತದಲ್ಲಿ ವೈಯಕ್ತಿಕ ಸರಾಸರಿ ಸಿಗಬಹುದಾದ ವ್ಯವಸಾಯಯೋಗ್ಯ ಭೂಮಿಗಿಂತ ಫ್ರಾನ್ಸ್, ನ್ಯೂಜಿಲೆಂಡ್, ಯುಗೊಸ್ಲೊವಿಯಾ, ಚೀನಾ ದೇಶಗಳಲ್ಲಿನ ಜನರ ಸರಾಸರಿ ವ್ಯವಸಾಯಯೋಗ್ಯ ಭೂಮಿಯು ಕಡಿಮೆ ಆಗಿದೆ. ಅಂದಮಾತ್ರಕ್ಕೆ ಭಾರತ ಈ ದೇಶಗಳಿಗಿಂತ ಹೆಚ್ಚು ಶ್ರೀಮಂತವಾಗಿರದೆ, ಕಡುಬಡತನದಲ್ಲಿಯೇ ಇದೆ. ಯಾಕೆ?

(7ನೇ ಪುಟ ನೋಡಿ)

# ಧರ್ಮ ರಾಷ್ಟ್ರದ ಆಧಾರವಲ್ಲ

ಜನಗಳ ಗಮನವನ್ನು ತೀವ್ರ ಸಾಮಾಜಿಕ ಸಮಸ್ಯೆಗಳಿಂದ ಬೇರೆ ಕಡೆ ತಿರುಗಿಸಲು ಪ್ರತಿಗಾಮಿ ಶಕ್ತಿಗಳು ಜಾತೀಯ ಭಾವನೆಗಳನ್ನು ಹರಡುತ್ತಿವೆ. ಅಲ್ಪಸಂಖ್ಯಾತರ ವಿರುದ್ಧ ಹಿಂಸೆಯನ್ನು ಪ್ರಚೋದಿಸುವುದಲ್ಲದೆ ಪ್ರಗತಿ ವಿರೋಧಿ ವಿಚಾರಗಳನ್ನು ಹರಡುತ್ತಿವೆ. ಸರ್ಕಾರದ ಪ್ರಮುಖ ನಾಯಕರುಗಳೂ ಈ ಶಕ್ತಿಗಳ ಜೊತೆ ಬಹಿರಂಗವಾಗಿ ಕೈಜೋಡಿಸುತ್ತಿದ್ದಾರೆ.

ನಮ್ಮ ಸಂವಿಧಾನದ ಪೀಠಿಕೆಯಲ್ಲಿ ಭಾರತವು ಜಾತ್ಯಾತೀತ,ಜನತಾಂತ್ರಿಕ ಸಮಾಜವಾದಿ ರಾಜ್ಯವೆಂದು ಹೇಳಿದೆ. ಆದರೆ ನಿರಂತರವಾಗಿ ಮತೀಯ ಘರ್ಷಣೆಗಳು ನಡೆಯುತ್ತಿದ್ದು ಜಾತ್ಯಾತೀತತೆ ಎಲ್ಲಿದೆ ಎಂದು ಕೇಳಬೇಕಾಗಿದೆ. ವಾಸ್ತವವಾಗಿ ಈ ಹಿಂದಿನ ಲೇಖನಗಳಲ್ಲಿ ಚರ್ಚಿಸಿದಂತೆ ಜಾತ್ಯಾತೀತತೆ ವಿಚಾರಗಳಿಗೆ ಬದಲಾಗಿ ಜಾತೀಯವಾದಿ ವಿಚಾರಗಳೇ ಜನರ ಮನಸ್ಸನ್ನು ಆಕ್ರಮಿಸುತ್ತಿವೆ. ನಮಗೆ ತಿಳಿದಂತೆ ಹಿಂದುಳಿದ ಪ್ರದೇಶಗಳಲ್ಲೇ ಈ ಜಾತೀಯ ಗಲಭೆಗಳು ನಡೆಯುತ್ತಿವೆ. ಮುಸ್ಲಿಂ ಜಾತೀಯವಾದಿಗಳು ಇಂತಹ ಗಲಭೆಗಳನ್ನು ತನ್ನ ಪ್ರಭಾವ ಹೆಚ್ಚಿಸಿಕೊಳ್ಳಲು ಬಳಸಿಕೊಳ್ಳುತ್ತಿವೆ.

ಜಾತ್ಯಾತೀತ ವಿಚಾರಗಳನ್ನು ಹರಡಲು ಸರ್ಕಾರವೂ ಗಂಭೀರ ಪ್ರಯತ್ನ ಮಾಡುತ್ತಿಲ್ಲ. ನಮ್ಮ ಸರ್ಕಾರಿ ನಾಯಕರುಗಳಿಗೆ ಅಲ್ಪಸಂಖ್ಯಾತರ ಸಮಸ್ಯೆಗಳನ್ನು ತಿಳಿಯಲು ಸಮಯವಿಲ್ಲ. ಆದರೆ ಎಲ್ಲ ಧರ್ಮದ ಮಠಮಂದಿರಗಳಿಗೆ ಮತ್ತು ಧಾರ್ಮಿಕ ಉತ್ಸವಗಳಿಗೆ ಭೇಟಿಕೊಡುತ್ತಾರೆ. ಜಾತ್ಯಾತೀತತೆ ಎಂದರೆ ಧರ್ಮವನ್ನು ಆಧರಿಸಿರದ ರಾಜಕೀಯವೆಂದು ನಾವು ತಿಳಿದೇ ಇಲ್ಲ. ಆದ್ದರಿಂದಲೇ ಜನತೆ ಜಾತೀಯತೆಯ ಆಧಾರದ ಮೇಲೆ ಪ್ರತ್ಯೇಕಗೊಂಡು ಅವರ ಗಮನ ಆರ್ಥಿಕ-ಸಾಮಾಜಿಕ ಸಮಸ್ಯೆಗಳಿಂದ ವಿಮುಖವಾಗಿದೆ.

## ಸಾಮ್ರಾಜ್ಯಶಾಹಿ ಕೊಡುಗೆ

ಇದೆಲ್ಲವೂ ಸಾಮ್ರಾಜ್ಯಶಾಹಿ ಆಡಳಿತದ ಕೊಡುಗೆ. ಸ್ವಾತಂತ್ರ್ಯ ಚಳುವಳಿಯಲ್ಲಿ ಬೆಳೆದ ಜನತೆಯ ಐಕ್ಯತೆಯು ಈ ಜಾತೀಯವಾದಿ ಶಕ್ತಿಗಳನ್ನು ಸೋಲಿಸಬಹುದೆಂದು ಜನತಾಂತ್ರಿಕ ಸಮೂಹವು ಆಶಿಸಿತ್ತು.

ವಿದೇಶಿ ಆಡಳಿತಗಾರರಿಗೆ ಜನತೆಯನ್ನು ಒಡೆದು ಆಳುವುದು ಅನಿವಾರ್ಯವಾಗಿತ್ತು. ಅಂತಹ ನೀತಿಗೆ ಜನವಿರೋಧಿ ಶಕ್ತಿಗಳು ಸಾಮಾಜಿಕ ನೆಲೆಯನ್ನು ಒದಗಿಸಿದ್ದವು. ಬ್ರಿಟಿಷರು ತಮ್ಮ ಶೋಷಣೆಗೆ ಪೂರಕವಾಗಿ ಭೂಮಾಲೀಕವರ್ಗ ವ್ಯಾಪಾರಿ ವರ್ಗಗಳನ್ನು ಬೆಳೆಸಿದರು. ಇದಕ್ಕಾಗಿ ಸಾಂಸ್ಕೃತಿಕವಾಗಿ ಹಿಂದುಳಿದಿದ್ದ ಭಾರತೀಯರನ್ನು ಬಳಸಿಕೊಂಡರು. ಮತೀಯ ಭಾವನೆಗಳನ್ನು ಕೆಣಕುವುದಲ್ಲದೆ ಪ್ರತ್ಯೇಕ ಪ್ರಾತಿನಿಧ್ಯ ವ್ಯವಸ್ಥೆಯನ್ನು ಜಾರಿಗೆ ತಂದರು.

ಭಾರತದಲ್ಲೇ ಅಲ್ಲದೆ ಪ್ರಪಂಚದ ವಿವಿಧ ಭಾಗಗಳಲ್ಲಿ ಪ್ರತಿಗಾಮಿ ಶಕ್ತಿಗಳು ಜನತೆಯನ್ನು ಧರ್ಮದ ಆಧಾರದ ಮೇಲೆ ಒಡೆದು ತಮ್ಮ ಆಳ್ವಿಕೆಯನ್ನು ಮುಂದುವರಿಸುತ್ತಿವೆ. ಬ್ರಿಟಿಷರು ಈ ಕುಟಿಲ ನೀತಿಯನ್ನು ಯಶಸ್ವಿಯಾಗಿ ಬಳಸಿಕೊಂಡರು.

ಭಾರತದ ಚರಿತ್ರೆಯನ್ನು ಓದಿದಾಗ ಬ್ರಿಟಿಷರ ಆಡಳಿತ ಕಾಲದಲ್ಲಿ ಇದ್ದ ಮತೀಯ ಘರ್ಷಣೆಗಳು ಅವರ ಆಗಮನಪೂರ್ವದಲ್ಲಿ ಇರಲಿಲ್ಲ ಎಂಬುದು ಕಂಡುಬರುತ್ತದೆ. ಹಿಂದೂ ಮುಸ್ಲಿಂ ರಾಜರ ನಡುವೆ ಯುದ್ಧಗಳು ನಡೆದರೂ ಮತೀಯ ಘರ್ಷಣೆಯ ರೂಪ ತಳೆಯಲಿಲ್ಲ. ಮುಸ್ಲಿಂ ಹಿಂದೂ ರಾಜರುಗಳು ಉನ್ನತ ಹುದ್ದೆಗಳಿಗೆ ಅನ್ಯ ಧರ್ಮೀಯರನ್ನು ನೇಮಕ ಮಾಡಿಕೊಂಡಿದ್ದರು. ಬ್ರಿಟಿಷರು ಬರುವುದಕ್ಕೆ ಮುಂಚೆ ಒಂದು ತಲೆಮಾರಿನ ಹಿಂದೆ ನಾಗರೀಕ ಶಾಂತಿಯನ್ನು ಕಲಕುವ ಮತೀಯ ಉದ್ವೇಗ ಅತ್ಯಂತ ಕಡಿಮೆ ಮಟ್ಟದಲ್ಲಿತ್ತು ಎಂಬ ಅಂಶವನ್ನು ಸೈಮನ್ ವರದಿಯೂ ಗುರುತಿಸಿದೆ.

ಮತೀಯಉದ್ವೇಗ ನಿಜವಾಗಿಯೂ ಬ್ರಿಟಿಷರ ಒಡೆದು ಆಳುವ ನೀತಿಯ ಫಲ ಜನತೆಯ ಐಕ್ಯತೆಯನ್ನು ಮುರಿಯಲು ಜಾತೀಯ ಪ್ರಾತಿನಿಧ್ಯವನ್ನು ಜಾರಿಗೆ ತಂದರು. ಈ ವ್ಯವಸ್ಥೆಯನ್ನು 1935ರ ಸಂವಿಧಾನದಲ್ಲೂ ಅಳವಡಿಸಿದರು. ಕೇವಲ ಮುಸಲ್ಮಾನರಿಗಲ್ಲದೆ, ಸಿಖ್‌ರಿಗೆ, ಆಂಗ್ಲೋ ಇಂಡಿಯನ್‌ರಿಗೆ ಪ್ರತ್ಯೇಕ ಪ್ರಾತಿನಿಧ್ಯ ನೀಡಿದರು. ಅಂತಸ್ತು ಮತ್ತು ಉನ್ನತ ಹುದ್ದೆಗಳಿಗೆ ಬಾಯಿಬಿಡುವ ಮಧ್ಯಮ ವರ್ಗವನ್ನು ತಮ್ಮ ಅನುಕೂಲಕ್ಕೆ ಉಪಯೋಗಿಸಿಕೊಂಡರು.

## ದ್ವಿ-ರಾಷ್ಟ್ರ ಸಿದ್ಧಾಂತ

ಧರ್ಮವನ್ನು ಆಧರಿಸಿದ ದ್ವಿ-ರಾಷ್ಟ್ರ ಸಿದ್ಧಾಂತವನ್ನು ಬ್ರಿಟಿಷರು ಉತ್ತೇಜಿಸಿದರು. ಹಿಂದೂ ರಾಷ್ಟ್ರ, ಪಾಕಿಸ್ತಾನ, ಖಲೀಸ್ತಾನ ವಾದಗಳಿಗೆ ಈ ಸಿದ್ಧಾಂತವೇ ಮೂಲವಾಗಿದೆ. ಭಾರತದ ವಿವಿಧ ಭಾಗಗಳಲ್ಲಿ ವಿವಿಧ ಧರ್ಮಕ್ಕೆ ಸೇರಿದ ಜನ ಒಂದೇ ಕುಟುಂಬದಂತೆ ವಾಸಿಸುತ್ತಿದ್ದು ಈ ಧರ್ಮ ಆಧಾರಿತ ಸಿದ್ಧಾಂತ ಜನತಂತ್ರಕ್ಕೆ ಕುತ್ತನ್ನು ಒಡ್ಡಿದೆ. ಜಾಗತಿಕ ಇತಿಹಾಸ ಮತ್ತು ಅನುಭವ ಈ ಸಿದ್ಧಾಂತದ ಪೊಳ್ಳನ್ನು ಬಯಲು ಮಾಡಿದೆ. ಈ ಸಿದ್ಧಾಂತದ ತರ್ಕ ಎಲ್ಲಿಗೆ ಮುಟ್ಟುತ್ತದೆ? ಯುರೋಪಿನ ಎಲ್ಲ ಕ್ಯಾಥೋಲಿಕರು, ಉತ್ತರ ಆಫ್ರಿಕದಿಂದ ಭಾರತದವರೆಗಿನ ಎಲ್ಲ ಮುಸಲ್ಮಾನರು ಭೌಗೋಳಿಕ ಎಲ್ಲೆಗಳನ್ನು ಮೀರಿ ಒಂದು ರಾಷ್ಟ್ರವೆಂದು ಪರಿಗಣಿಸಲ್ಪಡುತ್ತಾರೆ. ಆದರೆ ಹಿಂದೂ ಮುಸ್ಲಿಂ, ಕ್ರಿಶ್ಚಿಯನ್, ಸಿಖ್‌ರು ಪರಸ್ಪರ ವಿರುದ್ಧ ಉದ್ದೇಶಗಳನ್ನು ಹೊಂದಿದ್ದಾರೆಯೆ? ಮುಸಲ್ಮಾನರ ಬಡತನ, ಹಿಂದೂಗಳ ಬಡತನ ಎಂದು ಬೇರೆಬೇರೆ ಇಲ್ಲ. ಈ ಎಲ್ಲ ಧರ್ಮದ ಬಡವರು ಶೋಷಣೆಗೆ ಒಳಗಾಗಿದ್ದಾರೆ. ಆದ್ದರಿಂದ ಇವರ ವಿಮೋಚನೆ ಇಡೀ ಸಮಾಜದ ಆರ್ಥಿಕ-ರಾಜಕೀಯ ವ್ಯವಸ್ಥೆಯ ಬದಲಾವಣೆಯನ್ನು ಅವಲಂಬಿಸಿದೆ.

ಇಲ್ಲಿ ನಾವು ನಮ್ಮ ದೇಶದ ರಾಷ್ಟ್ರೀಯತೆಯ ಸಮಸ್ಯೆಯನ್ನು ಸರಿಯಾಗಿ ತಿಳಿದುಕೊಳ್ಳಬೇಕು. ಪ್ರತಿಗಾಮಿ ವಿಚ್ಛಿದ್ರಕಾರಿ ಶಕ್ತಿಗಳು ಜನತೆಯನ್ನು ಧರ್ಮದ ಆಧಾರದ ಮೇಲೆ ವಿಭಜನೆಮಾಡುವುದಲ್ಲದೆ, ಧಾರ್ಮಿಕ ನಂಬಿಕೆಗಳನ್ನು ರಾಷ್ಟ್ರೀಯತೆಯ ಪ್ರಶ್ನೆಯೊಂದಿಗೆ ಸೇರಿಸಿ ಗೊಂದಲವುಂಟು ಮಾಡುತ್ತಿವೆ. ಭಾರತವು ಧರ್ಮ ಆಧರಿತ 'ಬಹು ರಾಷ್ಟ್ರೀಯ' ದೇಶವೆಂದು ಹೇಳುತ್ತಿವೆ. ಇನ್ನೊಂದು ಕಡೆ ಗುತ್ತೇದಾರಿ ಶಕ್ತಿಗಳು ಭಾರತವು 'ಬಹುರಾಷ್ಟ್ರೀಯ' ದೇಶವಲ್ಲವೆಂದು ಹೇಳುತ್ತಾ ವಿವಿಧ ರಾಷ್ಟ್ರೀಯ ಸಮುದಾಯಗಳ ನಡುವಿನ ಐಕ್ಯತೆಯನ್ನು ಭಗ್ನಗೊಳಿಸುತ್ತಿವೆ.

## ಮಾರ್ಕ್ಸ್‌ವಾದದ ಚಿಂತನೆ

ಒಂದು ರಾಷ್ಟ್ರ ಏನನ್ನು ಆಧರಿಸಿದೆ ಎನ್ನುವುದನ್ನು ಸ್ಟಾಲಿನ್ ತನ್ನ 'ಮಾರ್ಕ್ಸ್‌ವಾದ ಮತ್ತು ರಾಷ್ಟ್ರೀಯತೆಯ ಪ್ರಶ್ನೆ'ಯಲ್ಲಿ ಸ್ಪಷ್ಟವಾಗಿ ವಿವರಿಸಿದ್ದಾನೆ. ರಾಷ್ಟ್ರವು ಐತಿಹಾಸಿಕವಾಗಿ ವಿಕಾಸಗೊಂಡು ಭಾಷೆ,ಭೌಗೋಳಿಕ ಪರಿಸರ, ಆರ್ಥಿಕ ಜೀವನ ಮತ್ತು ಮಾನಸಿಕ ಹೊಂದಾಣಿಕೆಯ ಭದ್ರಬುನಾದಿಹೊಂದಿದ್ದು ಸಾಂಸ್ಕೃತಿಕ ಸಮುದಾಯವಾಗಿ ರೂಪುಗೊಂಡಿರುತ್ತದೆ. ಆದರೆ ಮೇಲೆ ಹೇಳಿದ ಯಾವುದೇ ಒಂದು ಲಕ್ಷಣ ಇದ್ದ ಮಾತ್ರಕ್ಕೆ ರಾಷ್ಟ್ರವೆಂದು ವ್ಯಾಖ್ಯಾನಿಸಲಾಗುವುದಿಲ್ಲವೆಂದು ಒತ್ತಿಹೇಳಿದ್ದಾನೆ. ಮೇಲೆ ಹೇಳಿದ ಎಲ್ಲ ಲಕ್ಷಣಗಳು ಇರಲೇಬೇಕು.

ಒಂದು ರಾಷ್ಟ್ರದ ಬೆಳವಣಿಗೆ ಐತಿಹಾಸಿಕ ಪ್ರತಿಕ್ರಿಯೆಯ ಫಲ. ಇತಿಹಾಸದ ನಿರ್ದಿಷ್ಟ ಘಟ್ಟಕ್ಕೆ ಇದು ಸಂಬಂಧಿಸಿದ್ದು ಬೆಳೆಯುತ್ತಿರುವ ಬಂಡವಾಳಶಾಹಿಯ ಕೊಡುಗೆಯಾಗಿದೆ. ರಾಷ್ಟ್ರವು ಒಂದು ನಿರ್ದಿಷ್ಟ ಜನಸಮುದಾಯದ ಭೌತಿಕ, ತಾತ್ವಿಕ ಸಂಸ್ಕೃತಿಯ ನಿರಂತರತೆಯನ್ನು ಪ್ರತಿನಿಧಿಸುತ್ತದೆ. ಒಂದು ಪ್ರದೇಶದ ಜನರ ಭಾವನೆಗಳು ಪರಸ್ಪರ ಪ್ರೀತಿ ಪ್ರೇಮಗಳ ಮೊತ್ತವೇ ರಾಷ್ಟ್ರೀಯತೆಯ ತಳಹದಿ.

ರಾಷ್ಟ್ರೀಯತೆಯು ರೂಪುಗೊಳ್ಳುವಿಕೆ ಒಂದು ಸಂಕೀರ್ಣ ಸಂಸ್ಕರಣದ ಫಲ. ವಿವಿಧ ವಿಭಾಗಗಳ ಜನತೆಯ ಕ್ರಿಯೆಯಿಂದಾಗಿ ಪ್ರಭಾವಿತಗೊಳ್ಳುತ್ತದೆ; ವಿವಿಧ ಬುಡಕಟ್ಟುಗಳ ಆಪ್ರತತೆಯಿಂದಾಗಿ ಬೆಳೆದ ಸಾಂಸ್ಕೃತಿಕ-ಆರ್ಥಿಕ ಸಂಬಂಧಗಳು; ವಲಸೆ ಹೋಗುವುದು; ಬುಡಕಟ್ಟುಗಳ ಅಸ್ತಿಯಿಂದಾಗಿ ವರ್ಗಗಳ ನಿರ್ಮಾಣ; ವರ್ಗ ಸಮಾಜದಲ್ಲಿ 'ರಾಜ್ಯದ' ಉಗಮ. ಇವುಗಳು ರಾಷ್ಟ್ರೀಯತೆಯ ಬೆಳವಣಿಗೆಯಲ್ಲಿ ಪ್ರಬಲ ಪ್ರಭಾವ ಬೀರುತ್ತವೆ. ಊಳಿಗಮಾನ್ಯ ಅರಾಜಕತೆಯ ವಿರುದ್ಧದ ಬಂಡವಾಳಶಾಹಿ ವ್ಯವಸ್ಥೆಯ ಮುನ್ನಡೆಯೊಂದಿಗೆ 'ರಾಷ್ಟ್ರ'ವು ಸಂಪೂರ್ಣವಾಗಿ ವಿಕಾಸಗೊಳ್ಳುತ್ತದೆ.

## ಧರ್ಮ- ಆಧಾರವಲ್ಲ

ರಾಷ್ಟ್ರೀಯತೆಯು ರೂಪುಗೊಳ್ಳುವುದು ಧರ್ಮದ ಆಧಾರದಿಂದಲ್ಲದೆ ಐತಿಹಾಸಿಕ ಪ್ರತಿಕ್ರಿಯೆಯ ಬೆಳವಣಿಗೆಯೆಂದು ಮೇಲಿನ ಅಂಶಗಳಿಂದ ಸ್ಪಷ್ಟವಾಗುತ್ತದೆ. ಆದರೆ ಬ್ರಿಟಿಷ್ ಸಾಮ್ರಾಜ್ಯಶಾಹಿಗಳು ತಮ್ಮ ಒಡೆದು ಆಳುವ ನೀತಿಗೆ ಮತ್ತು ವರ್ಗಗಳ ಹಿತಾಸಕ್ತಿಗಳಿಗನುಗುಣವಾಗಿ. ಧಾರ್ಮಿಕ ಮುಖವಾಡದೊಂದಿಗೆ ಅನೇಕ ಜನಾಂಗೀಯ ಗುಂಪುಗಳನ್ನು ಒಂದೇ ಧರ್ಮಕ್ಕೆ (ರಾಷ್ಟ್ರಕ್ಕೆ) ಸೇರಿದವೆಂದು ಸಾರಿದರು. ಹಿಂದೂ, ಮುಸ್ಲಿಂ ಮತ್ತು ಸಿಖ್ಖರನ್ನು ವೈಜ್ಞಾನಿಕ ಪರೀಕ್ಷೆಗೊಳಪಡಿಸಿದರೆ ಅವರುಗಳನ್ನೊಂದು ರಾಷ್ಟ್ರವೆಂದು ಪರಿಗಣಿಸಲಾಗುವುದಿಲ್ಲ. ವಿವಿಧ ಪ್ರದೇಶಗಳಲ್ಲಿ ವಾಸಿಸುವ, ವಿವಿಧ ಭಾಷೆಗಳನ್ನಾಡುವ ಮತ್ತು ವಿವಿಧ ಸಾಂಸ್ಕೃತಿಕ ಹಿನ್ನೆಲೆ ಹೊಂದಿರುವ ಅವರುಗಳು ಒಂದು ರಾಷ್ಟ್ರವಾಗುವುದಿಲ್ಲ. ಪಂಜಾಬಿ ಮುಸಲ್ಮಾನರಿಗೂ, ಬಂಗಾಲಿ ಮುಸಲ್ಮಾನರಿಗೂ ಮತ್ತು ಬಿಹಾರಿ ಹಿಂದೂವಿಗೂ, ಕೇರಳ ಹಿಂದೂವಿಗೂ ಧರ್ಮವೊಂದನ್ನು ಬಿಟ್ಟರೆ ಇನ್ನಾವ ಸಮಾನ ಅಂಶಗಳಿವೆ. ಆದ್ದರಿಂದ ವಿವಿಧ ರಾಷ್ಟ್ರೀಯ ಸಮುದಾಯಗಳನ್ನು ಗುರುತಿಸುವಾಗ ಜನತೆಯ ಸಮಾನ-ಇತಿಹಾಸ, ಭಾಷೆ, ಸಂಸ್ಕೃತಿ, ಆರ್ಥಿಕ ಬದುಕು ಮತ್ತು ಮಾನಸಿಕ ಹೊಂದಾಣಿಕೆಗಳನ್ನು ಗಮನಿಸಬೇಕು. ಈ ಅಂಶಗಳ ಆಧಾರದ ಮೇಲೆ ಭಾರತ ಒಕ್ಕೂಟದಲ್ಲಿ ಹಲವಾರು ರಾಷ್ಟ್ರೀಯ ಸಮುದಾಯಗಳನ್ನು ಗುರುತಿಸಬಹುದು. ಧರ್ಮವನ್ನು ರಾಷ್ಟ್ರೀಯತೆಯ ಮಾನದಂಡವಾಗಿ ಯೋಚಿಸುವವರು ಜನತೆಯ ಐಕ್ಯತೆಯನ್ನು ಮುರಿಯುವ ಪಿತೂರಿ ಮಾಡುತ್ತಿದ್ದಾರೆ.

## ದೇಶದ ಐಕ್ಯತೆ

ಸ್ವಾತಂತ್ರ ಚಳುವಳಿಯಲ್ಲಿ ದೇಶದ ಐಕ್ಯತೆಯನ್ನು ಮೈಗೂಡಿಸಿಕೊಂಡ ಭಾರತ 'ಬಹುರಾಷ್ಟ್ರೀಯ' ದೇಶವೇ ಅಲ್ಲವೇ ಎನ್ನುವ ಪ್ರಶ್ನೆಗೆ ಬರೋಣ. ಆಳುವ ವರ್ಗಗಳು ಭಾರತವು ಬಹುರಾಷ್ಟ್ರೀಯ ದೇಶವೆಂದು ಒಪ್ಪುವುದಿಲ್ಲ. ಭಾರತವು ಒಂದೇ ರಾಷ್ಟ್ರವೆಂದು ಜನಗಳ ಮನಸ್ಸನ್ನು ತುಂಬುತ್ತಿದ್ದಾರೆ. ಬ್ರಿಟಿಷರಂತೆ ಇವರೂ ಕುಟಿಲ ನೀತಿಯನ್ನು ಅನುಸರಿಸುತ್ತಿದ್ದಾರೆ. ಇವರ ಒಡೆದು ಆಳುವ ನೀತಿಯನ್ನು ಬಹಿರಂಗಗೊಳಿಸಬೇಕಾಗಿದೆ.

ಸಾಮ್ರಾಜ್ಯಶಾಹಿಗಳ ವಿರುದ್ಧ ನಡೆದ ಭಾರತ ವಿಮೋಚನಾ ಚಳುವಳಿಯನ್ನು ಯಾವಾಗಲೂ ಭಾರತ ರಾಷ್ಟ್ರೀಯ ಚಳುವಳಿಯೆಂದು ಪರಿಗಣಿಸಲಾಗಿದೆ. ಇದರಿಂದಾಗಿ ಭಾರತದ ಉಪಖಂಡದಲ್ಲಿ ವಾಸಿಸುವ ವಿವಿಧ ಭಾಷೆಗಳ ಜನರನ್ನು ಏಕರಾಷ್ಟ್ರೀಯರೆಂದು ಬಗೆಯಲಾಯಿತು. ವಿವಿಧ ರಾಷ್ಟ್ರೀಯ ಸಮುದಾಯಗಳು ನಿಜವಾದ ಐಕ್ಯತೆಯನ್ನು ಸಾಧಿಸಿ ಸ್ವಾತಂತ್ರ್ಯ ಚಳುವಳಿಯನ್ನು ಯಶಸ್ವಿಗೊಳಿಸಿದವು. ಬಹುರಾಷ್ಟ್ರೀಯತೆಯ ವಿವಿಧತೆಯು ಈ ಮೂಲಭೂತ ಏಕತೆಯನ್ನು ವಿರೋಧಿಸುವುದಿಲ್ಲ. ನಮ್ಮ ಸಾಮಾಜಿಕ-ಆರ್ಥಿಕ ಜೀವನದಿಂದ ಮತ್ತು ಸಾಮ್ರಾಜ್ಯಶಾಹಿ ಶೋಷಣೆಯ ವಿರುದ್ಧ ಭಾರತದ ರಾಷ್ಟ್ರೀಯ ಚಳುವಳಿಯು ರೂಪುಗೊಂಡಿತು.

## ಏಕರಾಷ್ಟ್ರವಲ್ಲ

ಭಾರತವನ್ನು ಸಮಾನ ಭಾಷೆ, ಸಂಸ್ಕೃತಿ ಮಾನಸಿಕ ಹೊಂದಾಣಿಕೆ ಆಧರಿಸಿದ ಏಕರಾಷ್ಟ್ರವೆಂದು ಹೇಳಲಾಗುವುದಿಲ್ಲ. ಭಾರತವನ್ನು ಏಕ ರಾಷ್ಟ್ರವೆಂದು ಹೇಳುವುದರಿಂದ ರಾಷ್ಟ್ರೀಯತೆಯ ಸಮಸ್ಯೆಗೆ ಪರಿಹಾರ ಕಂಡುಹಿಡಿಯಲು ಸಾಧ್ಯವಿಲ್ಲ.

ಭಾರತ ಉಪಖಂಡವು ವಿಭಜನೆಗೆ ಮೊದಲು ಮತ್ತು ನಂತರವೂ ಸಹ ವಿವಿಧ ಭಾಷೆಗಳನ್ನಾಡುವ ವಿವಿಧ ಸಾಂಸ್ಕೃತಿಕ ಹಿನ್ನೆಲೆಯುಳ್ಳ, ವಿವಿಧ ಜನಾಂಗೀಯಗಳಿಗೆ ಸಂಬಂಧಿಸಿದ ಜನಗಳನ್ನು ಒಳಗೊಂಡಿದೆ. ಭಾರತ ಮತ್ತು ಪಾಕೀಸ್ಥಾನಗಳೆರಡೂ ಬಹುರಾಷ್ಟ್ರೀಯ ದೇಶಗಳೆಂದು ಇತಿಹಾಸ ಸಿದ್ಧಪಡಿಸಿದೆ. ಮತ್ತು ಧರ್ಮ ಆಧಾರಿತ ದ್ವಿರಾಷ್ಟ್ರ ಸಿದ್ಧಾಂತದ ಪೊಳ್ಳನ್ನು ಬಯಲು ಮಾಡಿದೆ. ಭಾರತವು ಬಹುರಾಷ್ಟ್ರೀಯ ಮತ್ತು ಬಹುಭಾಷಾ ದೇಶವೆನ್ನುವುದನ್ನು ಹಲವಾರು ಅಂಶಗಳು ಸಮರ್ಥಿಸುತ್ತವೆ. ಸಂವಿಧಾನದಲ್ಲಿ ಭಾರತವನ್ನು ಒಕ್ಕೂಟವೆಂದು ಕರೆದಿರುವುದು, ರಾಜ್ಯಗಳನ್ನು ಭಾಷೆಗಳ ಮೇಲೆ ವಿಂಗಡಿಸುವುದು ಮತ್ತು ರಾಜ್ಯಗಳಿಗೆ ಹೆಚ್ಚಿನ ಅಧಿಕಾರದ ಬೇಡಿಕೆ ಕೇಳಿಬರುತ್ತಿರುವುದು ಈ ಅಂಶವನ್ನು ಸ್ಪಷ್ಟಪಡಿಸುತ್ತವೆ.

ಭಾರತದ ಐಕ್ಯತೆಯನ್ನು ಮುರಿಯುವ ವಿಚ್ಛಿದ್ರಕಾರಿ ಶಕ್ತಿಗಳನ್ನು

(7ನೇ ಪುಟ ನೋಡಿ)

# ಸಿ.ಪಿ.ಐ.(ಎಂ) ವಿರುದ್ಧ ರಾಜೇಶ್ವರರಾಯರ ಫಿರಂಗಿ ಗುಂಡುಗಳನ್ನು ಕುರಿತು

ಮೇ 31, 1981ರ 'ನ್ಯೂ ಏಜ್' "ತಮ್ಮದು ಸರಿಯೆಂಬ ಸಿ. ಪಿ. ಐ. (ಎಂ) ನಾಯಕರ ಬುಡವಿಲ್ಲದ ಹೇಳಿಕೆಗಳು" ಎಂಬ ಶಿರೋನಾಮೆಯಲ್ಲಿ ಸಿ. ಪಿ. ಐ.ನ ಮಹಾ ಕಾರ್ಯದರ್ಶಿ ಸಿ. ರಾಜೇಶ್ವರರಾವ್ ಅವರ ಲೇಖನವನ್ನು ಪ್ರಕಟಿಸಿದೆ. ಸಿ. ಪಿ. ಐ. (ಎಂ) ವಿರುದ್ಧ ಈ ವಾಗ್ಬಾಣಗಳ ಸಂದರ್ಭ ಹಾಗೂ ಸ್ಫೂರ್ತಿ ಯಾವುದು?

ಪಾರ್ಟಿಯು ಕೇರಳ ರಾಜ್ಯದ ಪ್ಲೀನಮ್‌ನಲ್ಲಿ ಇ. ಎಂ. ಎಸ್. ನಂಬೂದಿರಿಪಾಡರ ಭಾಷಣದಿಂದ ಆರಿಸಿದ ಕೆಲವು ಉದ್ಧರಣೆಗಳನ್ನು ಮೇ 3, 1981ರ "ಪೀಪಲ್ಸ್ ಡೆಮಾಕ್ರಸಿ" ಪ್ರಕಟಿಸಿತ್ತು.

ಅದರಲ್ಲಿ ಕೆಲವು ವಿಷಯಗಳ ಬಗ್ಗೆ ಉದ್ದೇಶಿತವಾಗಿರದ ಅರ್ಥವನ್ನು ಕೊಡುವ ಕೆಲವು ಹೇಳಿಕೆಗಳಿದ್ದವು ಎಂಬುದು ನಿಜ. ಇದಕ್ಕಾಗಿಯೇ ಇ. ಎಂ. ಎಸ್. ನಂತರದ "ಪೀಪಲ್ಸ್ ಡೆಮಾಕ್ರಸಿ"ಯಲ್ಲಿ ಒಂದು ಟಿಪ್ಪಣಿ ಬರೆದರು. "ಕೆಲವು ಪರಿಚ್ಛೇದಗಳು ನಾನು ಯೋಚಿಸಿರದ ಅರ್ಥವನ್ನು ಸೂಚಿಸುತ್ತವೆ". ಮತ್ತು "ಆ ಭಾಷಣ ಭಾಗಶಃ ಲಿಖಿತವಾಗಿತ್ತು ಹಾಗೂ ಭಾಗಶಃ ಬಾಯ್ದೆರೆಯಾಗಿತ್ತು". ಮತ್ತು "ಅನಂತರ ಪತ್ರಿಕೆಗೆ ಹೋದ ಪಾಠವನ್ನು ಪರಿಷ್ಕರಿಸುವ ಅವಕಾಶವಿರಲಿಲ್ಲ" ಮತ್ತು "ಇದರಿಂದಾಗಿ ಉಂಟಾದ ಗೊಂದಲಕ್ಕೆ ವಿಷಾದಿಸುತ್ತೇನೆ" ಎಂದು ಆ ಟಿಪ್ಪಣಿಯಲ್ಲಿ ಇ. ಎಂ. ಎಸ್. ಹೇಳಿದ್ದಾರೆ. ನ್ಯಾಯಬುದ್ಧಿಯ ಯಾವನೇ ವ್ಯಕ್ತಿ ಇ.ಎಂ.ಎಸ್.ರ ವಿವರಣೆಯನ್ನು ಸ್ವೀಕರಿಸುತ್ತಿದ್ದ; ಸಿ. ಪಿ. ಐ. (ಎಂ) ಮತ್ತು ಅದರ ನಾಯಕತ್ವದೊಂದಿಗೆ ಕೀಳುಮಟ್ಟದ ವಾಗ್ವಾದಕ್ಕಿಳಿಯುತ್ತಿರಲಿಲ್ಲ. ಆದರೆ ರಾಜೇಶ್ವರರಾವ್ ಬೇರೆ ತರಾನೇ ಯೋಚಿಸಿರಬೇಕು. ಅವರು ಇ. ಎಂ. ಎಸ್.ರ ಪ್ರಕಟಿತ ಭಾಷಣದ ಮೇಲೆ ಹೆಣದ ಮೇಲೆ ಹದ್ದು ಎರಗುವಂತೆ ಎರಗಿದ್ದಾರೆ; ಸಿ. ಪಿ. ಐ. (ಎಂ) ಮೇಲೆ ಹಲವು ಫಿರಂಗಿ ಗುಂಡು ಹಾರಿಸಿದ್ದಾರೆ.

## ವಿಕೃತ ಚಿತ್ರ

ಕಥೆಯ ವಿಚಿತ್ರ ಅಂಶವೆಂದರೆ ತನ್ನ ಲೇಖನದಲ್ಲಿ ರಾಜೇಶ್ವರರಾಯರೇ ಸ್ವತಃ "ಕಳೆದ ಮೂರು ವರ್ಷಗಳಲ್ಲಿ ಸಿ. ಪಿ. ಐ., ಸಿ. ಪಿ. ಐ. (ಎಂ) ಹಾಗೂ ಇತರ ಎಡಪಕ್ಷಗಳ ನಡುವೆ ರಾಜಕೀಯ ನಿಲುವು ಹಾಗೂ ಸಾಮೂಹಿಕ ಕಾರ್ಯಾಚರಣೆಯನ್ನು ಕುರಿತು ಸ್ವಲ್ಪಮಟ್ಟಿನ ಐಕ್ಯತೆ ಬಂದಿರುವ ಸುಖಕರ ಅನುಭವವಿತ್ತು". ಹಾಗೂ "ಭೂತಕಾಲದ ಬಗೆಗಿನ ವಿವಾದಗಳು ನಮ್ಮನ್ನು ಐಕ್ಯತೆಯೆಡೆಗೆ ಒಯ್ಯುತ್ತವೆಯೋ ಇಲ್ಲವೋ ನಮಗೆ ಗೊತ್ತಿಲ್ಲ" ಎಂದು ಹೇಳಿದ್ದಾರೆ. ಈ ಸೋದರಭಾವನೆಗಳನ್ನು ಸಂಪೂರ್ಣ ಬದಿಗೆ ತಳ್ಳಿ ರಾಜೇಶ್ವರ ರಾವ್ ಒಂದೊಮ್ಮೆ ಸಂಯುಕ್ತವಾಗಿದ್ದ ಸಿ.ಪಿ.ಐ.ನಲ್ಲಿ 1963–64ರಲ್ಲಿ ಕಂಡುಬಂದ ಒಡಕುಗಳಿಗೆ ಕಾರಣ ತಿಳಿಸುವಾಗ ವಿರೂಪಗೊಂಡ ಹಾಗೂ ತಮ್ಮನ್ನು ಸಮರ್ಥಿಸಿಕೊಳ್ಳುವ ಚಿತ್ರಣ ಕೊಡಬೇಕೆಂದು ನಿರ್ಧರಿಸಿದ್ದಾರೆ. 1963-64ರಲ್ಲಿ ಭಾರತದ ಕಮ್ಯುನಿಸ್ಟ್ ಚಳುವಳಿಯಲ್ಲುಂಟಾದ ಒಡಕಿನ ಬಗ್ಗೆ ಪ್ರಾಮಾಣಿಕ ಹಾಗೂ ವಸ್ತುನಿಷ್ಟ ಚರಿತ್ರೆಕಾರನ ಸೋಗುಹಾಕಿಕೊಂಡು "ಸಂಯುಕ್ತ ಸಿ. ಪಿ. ಐ.ನಲ್ಲಿ ಒಂದು ಸ್ಥಿರವಾದ ಅಲ್ಪಸಂಖ್ಯಾತ ಪಂಥವಾದೀ ಪ್ರವೃತ್ತಿ ಅಸ್ತಿತ್ವದಲ್ಲಿದ್ದು 1964ರಲ್ಲಿ ಬೇರೆಯಾಗಿ ಸಿ.ಪಿ.ಐ. (ಎಂ)ನ್ನು ಸಂಘಟಿಸಿತು" ಎಂದೆನ್ನುತ್ತಾರೆ ಅವರು. ಅಂದರೆ ಆಗೊಂದು ಸ್ಥಿರವಾದ ಬಹುಸಂಖ್ಯಾತ ಮಾರ್ಕ್ಸ್‌ವಾದಿ-ಲೆನಿನ್‌ವಾದಿ ಪ್ರವೃತ್ತಿ ರಾಜೇಶ್ವರರಾಯರ ನೇತೃತ್ವದಲ್ಲಿದ್ದು ಈಗಿನ ಸಿ. ಪಿ. ಐ. (ಎಂ) ನಾಯಕರು ಪ್ರತಿನಿಧಿಸುತ್ತಿದ್ದ "ಸ್ಥಿರವಾದ ಅಲ್ಪಸಂಖ್ಯಾತ ಪಂಥವಾದೀ ಪ್ರವೃತ್ತಿ"ಯ ವಿರುದ್ಧ ಸರಿಯಾದ ಮಾರ್ಕ್ಸ್‌ವಾದೀ ನಿಲುವನ್ನು ರಕ್ಷಿಸಲು ಹೋರಾಡಿತು ಎಂದು ಓದುಗರಿಗೆ ಹೇಳಲಾಗುತ್ತಿದೆ!

"ಅಲ್ಪಸಂಖ್ಯಾತ ಪಂಥವಾದೀ ಪ್ರವೃತ್ತಿ"ಯ ಈ ಹೋರಾಟ ಹೇಗೆ ಕೊನೆಗೊಂಡಿತು ಹಾಗೂ ಅದು ಸಿ. ಪಿ. ಐ. ಮತ್ತು ಅದರ ನಾಯಕರನ್ನು ಅಂತಿಮವಾಗಿ ಎಲ್ಲಿಗೆ ಕೊಂಡೊಯ್ಯಿತು? ಬದುಕು ಹಾಗೂ ಇತಿಹಾಸದ ಅಲ್ಲಗಳೆಯಲಾಗದ ವಾಸ್ತವ ಸಂಗತಿಗಳು ನಮಗೆ ಹೇಳುತ್ತಿವೆ - ಸಿ. ಪಿ. ಐ. ಬೂರ್ಜ್ವಾ-ಭೂಮಾಲೀಕ ಪಕ್ಷವಾದ ಕಾಂಗ್ರೆಸ್‌ನ ಮಡಿಲಿಗೆ ಬಿತ್ತು. ಅದು ದೇಶದಲ್ಲಿ ಸಂಸದೀಯ ಪ್ರಜಾಪ್ರಭುತ್ವವನ್ನು ನಾಶಮಾಡುವ, ಜನರ ಪ್ರಜಾಸತ್ತಾತ್ಮಕ ಹಕ್ಕುಗಳನ್ನು ಹಾಗೂ ನಾಗರಿಕ ಸ್ವಾತಂತ್ರ್ಯಗಳನ್ನು ಸಂಪೂರ್ಣ ರದ್ದುಗೊಳಿಸುವ ದ್ವೇಷಕಾರೀ ತುರ್ತುಪರಿಸ್ಥಿತಿಗೆ ತನ್ನೆಲ್ಲಾ ಬೆಂಬಲಕೊಟ್ಟಿತು. ಈಗ "ನಾವು ತುರ್ತುಪರಿಸ್ಥಿತಿ ಸಮಯದಲ್ಲಿ ಗಂಭೀರ ತಪ್ಪುಮಾಡಿದೆವು, ನಾವು ನಮ್ಮ ತಪ್ಪುಗಳನ್ನು ಉತ್ತಮ ಲೆನಿನ್‌ವಾದೀ ಸಂಪ್ರದಾಯಕ್ಕನುಗುಣವಾಗಿ ಸರಿಪಡಿಸಿಕೊಳ್ಳುವಷ್ಟು ವಿನೀತರಾಗಿದ್ದೇವೆ" ಎಂದು ತಣ್ಣಗೆ ಜಗತ್ತಿಗೆ ಹೇಳಲು ಪ್ರಯತ್ನಿಸುವುದು ಗೋಸುಂಬೆತನದ ಪರಮಾವಧಿಯಲ್ಲವೇ?

## ಲೆನಿನ್‌ವಾದಕ್ಕೆ ಕಳಂಕ

ಸಿ. ಪಿ. ಐ. "ಉತ್ತಮ ಲೆನಿನ್‌ವಾದೀ ಸಂಪ್ರದಾಯದಲ್ಲಿ" ಆತ್ಮಪರೀಕ್ಷೆ ಮಾಡಿಕೊಂಡಿದೆ ಎಂದು ಹೇಳಿಕೊಳ್ಳುವುದು ಲೆನಿನ್‌ವಾದದ ಮೇಲೆ ಮಸಿಬಳೆದಂತೆ. ಆತ್ಮವಿಮರ್ಶೆಯ ಲೆನಿನ್‌ವಾದೀ ನೀತಿಯೆಂದರೆ ಒಂದು ಕಮ್ಯುನಿಸ್ಟ್ ಪಕ್ಷ "ಮುಚ್ಚುಮರೆಯಿಲ್ಲದೆ ಒಂದು ತಪ್ಪನ್ನು ಒಪ್ಪಿಕೊಂಡು, ಅದಕ್ಕೆ ಕಾರಣಗಳನ್ನು ತಿಳಿದು, ಅದನ್ನು ಸರಿಪಡಿಸುವ ವಿಧಾನಗಳ ಬಗ್ಗೆ ಚರ್ಚಿಸಿ ನಿರ್ಧರಿಸಬೇಕು... ಇದು ಒಂದು ಜವಾಬ್ದಾರಿಯುತ ರಾಜಕೀಯ ಪಕ್ಷದ ಲಕ್ಷಣ; ಇದು ಒಂದು ಪಕ್ಷ ತನ್ನ ಕರ್ತವ್ಯಗಳನ್ನು ಪಾಲಿಸಬೇಕಾದ, ತನ್ನ ವರ್ಗ ಹಾಗೂ ಜನಸಮೂಹಕ್ಕೆ ಶಿಕ್ಷಣ ಕೊಡುವ ರೀತಿ" ತುರ್ತುಪರಿಸ್ಥಿತಿಯಲ್ಲಿ ಮಾಡಿದ "ಗಂಭೀರ ತಪ್ಪಿನ" ಬಗ್ಗೆ ರಾಜೇಶ್ವರ ರಾಯರು ಹಾಗೂ ಅವರ ಪಕ್ಷ ಯಾವ ರೀತಿಯ ವಿಶ್ಲೇಷಣೆ ನಡೆಸಿದ್ದಾರೆ? ತುರ್ತುಪರಿಸ್ಥಿತಿಯ ಕಾಂಗ್ರೆಸ್ ಆಡಳಿತದ ಸುತ್ತ ಸೇರಿಕೊಂಡು ಅದನ್ನು ಎದುರಿಸುವವರನ್ನು ಹಾಗೂ ವಿರೋಧಿಸುವವರನ್ನು, ಬಲಪಂಥೀಯ ಪ್ರತಿಕ್ರಿಯಾವಾದಿಗಳು, ಫ್ಯಾಸಿಸ್ಟರು ಹಾಗೂ ಅವರ ಹಸ್ತಕರೆಂದು ಖಂಡಿಸುವುದು-ಇವೆಲ್ಲಾ ಹೇಗೆ ನಡೆಯಿತು? ಕಮ್ಯುನಿಸ್ಟ್ ಪಕ್ಷ ಎಂದು ಹೆಸರಿಟ್ಟುಕೊಂಡ ಒಂದು ಪಕ್ಷ ಭಾರತದ ಸಂವಿಧಾನದ ಪ್ರಜಾಸತ್ತಾತ್ಮಕ ಸತ್ವವನ್ನು ನಾಶಗೊಳಿಸಿ ಸರ್ವಾಧಿಕಾರೀ ಆಡಳಿತವನ್ನು ಹೇರಬಯಸಿದ 42ನೇ ತಿದ್ದುಪಡಿಗೆ ಸರ್ವರೀತಿಯ ಬೆಂಬಲವನ್ನು ಹೇಗೆ ಕೊಟ್ಟಿತು? ಸಿ. ಪಿ. ಐ. ನಾಯಕರು ಉದ್ದಕ್ಕೂ ಸರಿಯಾದ ಮಾರ್ಕ್ಸ್‌ವಾದೀ ಲೆನಿನ್‌ವಾದೀ ಮಾರ್ಗದಲ್ಲೇ ಮುನ್ನಡೆಯುತ್ತಿದ್ದು ಆಕಸ್ಮಾತ್ತಾಗಿ ಕಾಲುಜಾರಿ ತುರ್ತುಪರಿಸ್ಥಿತಿಯ ಆಡಳಿತವನ್ನು ಸಮರ್ಥಿಸುವ "ಗಂಭೀರ ತಪ್ಪು" ಮಾಡಿದರೆಂದು ನಾವು ತಿಳಿಯಬೇಕೇ?

ವಾಸ್ತವ ಸಂಗತಿಯೆಂದರೆ ಒಂದೊಮ್ಮೆ ಸಂಯುಕ್ತವಾಗಿದ್ದ ಸಿ.ಪಿ.ಐ.ನ ನಾಯಕತ್ವದಲ್ಲಿ ಎಡೆಬಿಡದೆ, ಸತತವಾಗಿ ಹಾಗೂ ದೀರ್ಘ ಹೋರಾಟವನ್ನು ಪಕ್ಷದೊಳಗೇ ನಡೆಸಿದ ಒಂದು ವಿಭಾಗವಿತ್ತು. ಇದು ಆಡಳಿತ ಕಾಂಗ್ರೆಸ್ ಪಕ್ಷ ಹಾಗೂ ಸರಕಾರದೊಡನೆ ಸಹಕರಿಸಿ, ಅದರೊಡನೆ ಕೈಮಿಲಾಯಿಸುವಂತೆ ಮಾಡಿ ಪಕ್ಷವನ್ನು ಬೂರ್ಜ್ವಾ-ಭೂಮಾಲೀಕ ವರ್ಗಗಳ ಬಾಲವನ್ನಾಗಿಸಲು ಬಲವಂತಮಾಡುವ ಹಾಗೂ ಆ ವರ್ಗಗಳ ಜನವಿರೋಧೀ ಆಡಳಿತವನ್ನು ಬೆಂಬಲಿಸುವಂತೆ ಮಾಡುವ ಹೋರಾಟವಾಗಿತ್ತು. 1951ರ ಪಕ್ಷದ ಕಾರ್ಯಕ್ರಮದಲ್ಲಿದ್ದ ಪಂಥವಾದೀ ತಿಳುವಳಿಕೆಯನ್ನು ಸರಿಪಡಿಸುವ ನೆಪದಲ್ಲಿ 1955ರ ಮಧ್ಯದಿಂದಲೇ ಈ ಹೋರಾಟ ನಡೆದಿತ್ತು. 1951ರ ಕಾರ್ಯಕ್ರಮದಲ್ಲಿ ಪಂಥವಾದೀ ತಪ್ಪುಗಳಿದ್ದರೆ-ಅಂತಹ ತಪ್ಪುಗಳು ಖಂಡಿತವಾಗಿಯೂ ಇದ್ದವು-ಅದು "ಸ್ಥಿರವಾದ ಅಲ್ಪಸಂಖ್ಯಾತ ಪಂಥವಾದೀ ಪ್ರವೃತ್ತಿ"ಮಾತ್ರ ನೀಡಿದ ಕೊಡುಗೆಯಲ್ಲ; ರಾಜೇಶ್ವರರಾಯರೂ ಸೇರಿದಂತೆ ಸಂಪೂರ್ಣ ನಾಯಕತ್ವ ಮಾಡಿದ ಸಾಮೂಹಿಕ ತಪ್ಪು ಅದಾಗಿತ್ತು.

## ಕೈಮಿಲಾಯಿಸುವ ಕಾರ್ಯಕ್ರಮ

ಸಿ.ಪಿ.ಐ.ನ ಈ ಸ್ವಯಂ ಘೋಷಿತ "ಲೆನಿನ್‌ವಾದೀ" ವಿಭಾಗ 1955ರಿಂದಾರಂಭಿಸಿ 1964ರಲ್ಲಿ ತನ್ನ ಹೊಸ "ಪಕ್ಷ ಕಾರ್ಯಕ್ರಮ"ದಲ್ಲಿ ಆಳುವ ಕಾಂಗ್ರೆಸ್ ಪಕ್ಷ ಹಾಗೂ ಸರಕಾರಕ್ಕೆ ಸಂಪೂರ್ಣ ಸಹಕಾರವನ್ನು ಅದರ ಜೊತೆಗೂಡಿ ಕೆಲಸಮಾಡುತ್ತೇವೆಂದು ಸಾರುವ ಹೊಸ ರಾಜಕೀಯ ಮಾರ್ಗವನ್ನು ಘೋಷಿಸಲು ಸುಮಾರು ಹತ್ತು ವರ್ಷಗಳೇ ಹಿಡಿದವು. ವರ್ಗ ಸಹಕಾರವನ್ನು ಬೆಂಬಲಿಸುವ ಚತುರ ವಾದಗಳನ್ನು ಹೂಡಲಾಯಿತು. ಬೂರ್ಜ್ವಾವರ್ಗದೊಂದಿಗೆ ಮಿತ್ರತ್ವ ಹೊಂದಿದ ಭೂಮಾಲೀಕವರ್ಗವನ್ನು ಬಿಟ್ಟು ಸದ್ಯದ ಭಾರತದ ಪ್ರಭುತ್ವದ ವರ್ಗಸ್ವಭಾವವನ್ನು "ಬೂರ್ಜ್ವಾ ಪ್ರಭುತ್ವ" ಎಂದು ನಿರ್ವಚಿಸಲಾಯಿತು. ಈ ಬೂರ್ಜ್ವಾವನ್ನೂ ಮುಖ್ಯವಾಗಿ "ರಾಷ್ಟ್ರೀಯ ಬೂರ್ಜ್ವಾ ವರ್ಗ" ಎಂದು ನಿರ್ವಚಿಸಲಾಯಿತು. ತನ್ಮೂಲಕ ಪ್ರಭುತ್ವದ ನಾಯಕತ್ವದಲ್ಲಿದ್ದ ಬೂರ್ಜ್ವಾ ವರ್ಗವನ್ನು ರಕ್ಷಿಸಲಾಯಿತು. ಬೂರ್ಜ್ವಾ-ಭೂಮಾಲಿಕ ಪ್ರಭುತ್ವದ ವಿದೇಶಾಂಗ ಧೋರಣೆಯನ್ನು ಹಾಗೂ ಸರಕಾರವನ್ನು ಅದೊಂದು ಸುಸಂಗತ ಶಾಂತಿ ಧೋರಣೆ, ಸಾಮ್ರಾಜ್ಯಶಾಹಿ-ವಿರೋಧೀ ಧೋರಣೆ ಹಾಗೂ ಸಮಾಜವಾದೀ ಜಗತ್ತಿನೊಡನೆ ಮಿತ್ರತ್ವದ ಧೋರಣೆಯೇನೋ ಎಂಬಂತೆ ಪರಿಗಣಿಸಿ ಅದನ್ನು ವರ್ಗವಿಹೀನ, ವರ್ಗವನ್ನು ಮೀರಿದ ವಿದೇಶೀ ಧೋರಣೆ, ಆದಕ್ಕೆ ಭೂಮಾಲಿಕರ ಸಹಾಯದಿಂದ, ಏಕಸ್ವಾಮ್ಯ ಬಂಡವಾಳದೊಡನೆ ಸೇರಿಕೊಂಡು ಹಿಡಿದ ಬಂಡವಾಳಶಾಹೀ ಬೆಳವಣಿಗೆಯ ದಿವಾಳಿಖೋರ ಆಂತರಿಕ ನೀತಿಯೊಂದಿಗೆ ಏನೂ ಸಂಬಂಧವಿಲ್ಲವೆಂದೇ ಚಿತ್ರಿಸಲಾಯಿತು. 'ರಾಷ್ಟ್ರೀಯ ಪ್ರಜಾಪ್ರಭುತ್ವ' ಎಂಬ ಹೊಸ ಘೋಷಣೆಯನ್ನೆಬ್ಬಿಸಲಾಯಿತು ಮತ್ತು ರಾಷ್ಟ್ರೀಯ ಬೂರ್ಜ್ವಾ ಹಾಗೂ ಕಾರ್ಮಿಕ ವರ್ಗಗಳ ದ್ವಂದ್ವ ಮುಖಂಡತ್ವದ, ಜಂಟೀ ಅಧಿಪತ್ಯದ ಕೃತಕ ಪರಿಕಲ್ಪನೆಯನ್ನು ಮುಂದಿಡಲಾಯಿತು. ಇವೆಲ್ಲದರ ಉದ್ದೇಶ ಬೂರ್ಜ್ವಾ ನೇತೃತ್ವದ ಕಾಂಗ್ರೆಸ್ ಪಕ್ಷ ಹಾಗೂ ಸರಕಾರವನ್ನು ಆಲಂಗಿಸಿಕೊಳ್ಳುವುದು. ಇವೆಲ್ಲಾ ಕೊಳಚೆಯೇ ಅಲ್ಲವೇ. ಸಿ.ಪಿ.ಐ. ಆಳುವ ಕಾಂಗ್ರೆಸ್ ಪಕ್ಷದ ಕೀಳು ಹಿಂಬಾಲಕನಾಗಿ ಕೇರಳದಲ್ಲಿ ಮಾರ್ಕ್ಸ್‌ವಾದೀ-ವಿರೋಧೀ ರಂಗದಲ್ಲಿ ಕಾಂಗ್ರೆಸ್‌ನ ಜತೆಗಾರನಾಗಲು ಕಾರಣವಾದದ್ದು?

ಈ ಎಲ್ಲಾ ರಾಜಕೀಯ ಅಪರಾಧಗಳನ್ನು ಮುಚ್ಚಿಹಾಕಿ ತುರ್ತು ಪರಿಸ್ಥಿತಿಯನ್ನು ಬೆಂಬಲಿಸಿದ "ಗಂಭೀರ ತಪ್ಪು" ಮಾಡಿದ ಅಮಾಯಕ ಗುಗ್ಗುವಿನಂತೆ ನಟಿಸುವುದು ಪ್ರಾಮಾಣಿಕ ಆತ್ಮವಿಮರ್ಶೆಯೂ ಅಲ್ಲ, "ತಪ್ಪನ್ನು ಉತ್ತಮ ಲೆನಿನ್‌ವಾದೀ ಸಂಪ್ರದಾಯದಂತೆ" ಸರಿಪಡಿಸಿಕೊಳ್ಳುವುದೂ ಅಲ್ಲ. ಎಸ್. ಎ. ಡಾಂಗೆಯ ಸಂಗತಿ ಹಾಗೂ ಆತನ ಇತ್ತೀಚಿನ ಗದ್ದಲ ಅಖಿಲಭಾರತ ಕಮ್ಯುನಿಸ್ಟ್ ಪಕ್ಷ ಇವು ಸಿ.ಪಿ.ಐ. ಹಲವು ವರ್ಷಗಳ ಕಾಲ ಅನುಸರಿಸಿದ ರಾಜಕೀಯ ಮಾರ್ಗದ ಹೇಯ ಫಲವಲ್ಲದೆ ಮತ್ತೇನೂ ಅಲ್ಲ. ಈಗ ನಿಸ್ಸಂದೇಹವಾಗಿಯೂ ಈ ಮಾರ್ಗವನ್ನು ಸರಿಪಡಿಸುವ ದುಃಖದಾಯಕ ಹಾಗೂ ನಿಧಾನಗತಿಯ ಪ್ರಕ್ರಿಯೆಯ ಮೂಲಕ ಅದು ಹಾದುಹೋಗುತ್ತಿದೆ.

[ಮುಂದುವರೆಯುವುದು]

### ಚಂದಾ ವಿವರ

| | |
|---|---|
| ಬಿಡಿ ಪ್ರತಿ | : 60ಪೈಸೆ |
| 6 ತಿಂಗಳಿಗೆ | : 15ರೂ. |
| ವಾರ್ಷಿಕ ಚಂದಾ | : 30ರೂ. |

## ಆರ್ಥಿಕ ಸಮೀಕ್ಷೆ

[3ನೇ ಪುಟದಿಂದ]

### ಮಾಲ್ತಸ್ ಸುಳ್ಳಾದ

ಜನಸಂಖ್ಯೆ ಹೆಚ್ಚಳವು ಬಡತನಕ್ಕೆ ಕಾರಣ ಎನ್ನುವುದು ಸತ್ಯಕ್ಕೆ ದೂರ. ಸುಮಾರು ಎರಡು ಶತಮಾನಗಳ ಹಿಂದೆ (1789) ಮಾಲ್ತಸ್ ಎಂಬ ಅರ್ಥಶಾಸ್ತ್ರಜ್ಞನು ಪ್ರಪಂಚದಲ್ಲಿ ಜನಸಂಖ್ಯೆ ಹೆಚ್ಚಳವು ಆಹಾರಧಾನ್ಯಗಳ ಉತ್ಪಾದನೆಯ ಹೆಚ್ಚಳವನ್ನು ಮೀರುವುದರಿಂದ ಉಂಟಾಗುವ ಅಸಮತೋಲನವು ನೆರೆ, ಬರಗಾಲ, ಸಾಂಕ್ರಾಮಿಕ ರೋಗ, ಯುದ್ಧ, ಇತ್ಯಾದಿ ಆಪತ್ತು ಅನಾಹುತಗಳಿಂದ ಹೋಗಲಾಡಿಸಲ್ಪಡುವುದು ಎಂದು ಭವಿಷ್ಯ ನುಡಿದಿದ್ದ. ಆದರೆ, ಆತನ ಭವಿಷ್ಯ ಸುಳ್ಳಾಯಿತು. ಕಾರಣ, ಆಗ ಪಾಳೆಯಗಾರಿ ಪದ್ಧತಿಯು ಅವಸಾನ ಕಾಲದಲ್ಲಿತ್ತು. ಬಂಡವಾಳಶಾಹಿ ಪದ್ಧತಿಯು ಶೈಶವಾವಸ್ಥೆಯಲ್ಲಿತ್ತು. ಹೊಸ ಸಮಾಜ ಪದ್ಧತಿಯಲ್ಲಿ ಬೃಹತ್‌ಪ್ರಮಾಣದಲ್ಲಿ ಕೃಷಿ ಮತ್ತು ಕೈಗಾರಿಕಾ ಉತ್ಪಾದನೆಗಳ ಸಾಧ್ಯತೆಯ ಅರಿವು ಮಾಲ್ತಸ್‌ನಿಗೆ ಇರಲಿಲ್ಲ. ಪಾಳೆಯಗಾರಿ ಪದ್ಧತಿಯ ಅವಸಾನದೊಂದಿಗೆ ಮಾನವ ಕುಲವೂ ಅವಸಾನ ಹೊಂದುವುದೆಂದು ಆತ ಭಾವಿಸಿದ್ದ. ಆದರೆ, ಮುಂದಿನ ಎರಡು ಶತಮಾನಗಳಲ್ಲಿ ವಿಜ್ಞಾನ, ತಂತ್ರಜ್ಞಾನ ಭಾರೀ ಪ್ರಮಾಣದಲ್ಲಿ ಬೆಳೆದು ಬಳಕೆಗೆ ಬಂದು ಪ್ರಪಂಚದ ಕೃಷಿ, ಕೈಗಾರಿಕಾ ಉತ್ಪಾದನೆ ಹತ್ತಾರು ಪಾಲು ಹೆಚ್ಚಾಯಿತು. ಜನಸಂಖ್ಯೆಯೂ, 1850 ರಿಂದ 1975ರ ಅವಧಿಯಲ್ಲಿ 1000 ಮಿಲಿಯದಿಂದ 4000 ಮಿಲಿಯಕ್ಕೇರಿತು.

ವಿಶ್ವಸಂಸ್ಥೆಯ ಜನಸಂಖ್ಯಾ ಅಧ್ಯಯನದ ವಿಶೇಷ ಅಂಗ ಸಂಸ್ಥೆಯ (UNEPA) ಇತ್ತೀಚಿಗಿನ ಒಂದು ಸಮೀಕ್ಷೆಯಂತೆ (ಇಂಡಿಯನ್ ಎಕ್ಸ್‌ಪ್ರೆಸ್ : 15-6-81) ಪ್ರಪಂಚದ ಒಟ್ಟು 1300 ಮಿಲಿಯ ಟನ್ ಆಹಾರಧಾನ್ಯಗಳ ಸದ್ಯದ ವಾರ್ಷಿಕ ಉತ್ಪಾದನೆಯು 6000 ಮಿಲಿಯ ಜನಸಂಖ್ಯೆಗೆ ಸಾಕಾಗುವುದು (ವಯಸ್ಕರಿಗೆ ವರ್ಷಕ್ಕೆ 225 ಕೆ.ಜಿ.ಯಂತೆ, ಮಕ್ಕಳಿಗೆ ವರ್ಷಕ್ಕೆ 75 ಕೆ. ಜಿ. ಯಂತೆ). ಅಂದರೆ, ಸದ್ಯದ ಜಾಗತಿಕ ಆಹಾರ ಉತ್ಪಾದನೆಯು ಸದ್ಯದ ಜನಸಂಖ್ಯೆಯ ಒಂದೂವರೆಪಟ್ಟು ಜನಸಂಖ್ಯೆಗೆ ಸಾಕಾಗಬಹುದೆಂದು ನಿರೀಕ್ಷಿಸಲಾಗಿದೆ. ಅರ್ಥಾತ್, ಈಗಿನ ಆಹಾರ ಉತ್ಪಾದನೆಯು ಈ ಶತಮಾನದ ಅಂತ್ಯದವರೆಗೆ ಹೆಚ್ಚುತ್ತಿರುವ ಜನಸಂಖ್ಯೆಗೆ ಸಾಕಾಗಬಹುದೆಂದು ಅಂದಾಜು ಮಾಡಲಾಗಿದೆ. ಅಷ್ಟಲ್ಲದೆ, ಪ್ರಪಂಚದ ಆಹಾರಧಾನ್ಯಗಳ ಉತ್ಪಾದನಾ ಸಾಮರ್ಥ್ಯವು 32500 ಮಿಲಿಯ ಟನ್‌ಗಳಷ್ಟು. ಈಗಿನಕ್ಕಿಂತ 25 ಪಾಲಿನಷ್ಟು ಹೆಚ್ಚುವ ಸಾಧ್ಯತೆ ಇದೆ ಎಂದು ಇತ್ತೀಚಿಗಿನ ಅಧ್ಯಯನಗಳಿಂದ ತಿಳಿದು ಬಂದಿದೆ.

ಇಷ್ಟೆಲ್ಲಾ ಉತ್ಪಾದನಾ ಸಾಮರ್ಥ್ಯಗಳಿದ್ದರೂ, ಪ್ರಪಂಚದಲ್ಲಿ 450 ಮಿಲಿಯ ಜನರಿಗೆ ಹೊಟ್ಟೆಗೆ ಸಾಕಷ್ಟು ಹಿಟ್ಟಿಲ್ಲ. 1200 ಮಿಲಿಯ ಜನರಿಗೆ ಕುಡಿಯಲು ಸಾಕಷ್ಟು ನೀರಿಲ್ಲ. ಆರೋಗ್ಯ ರಕ್ಷಣೆಯ ಸೌಕರ್ಯಗಳಿಲ್ಲ. 6 ರಿಂದ 11 ವರ್ಷಗಳವರೆಗಿನ 100 ಮಿಲಿಯ ಮಕ್ಕಳಿಗೆ ಶಾಲಾ ಸೌಲಭ್ಯವಿಲ್ಲ. ಜಗತ್ತಿನ ಮೂರನೇ ಒಂದರಷ್ಟು ಪ್ರಾಯಸ್ಥರು ನಿರುದ್ಯೋಗಿಗಳಾಗಿ ಅಥವಾ ಅರೆ ಉದ್ಯೋಗಿಗಳಾಗಿ ಅವರ ಕುಟುಂಬದ ಅವಶ್ಯಕ ಬೇಡಿಕೆಗಳನ್ನು ಈಡೇರಿಸಿಕೊಳ್ಳಲು ಸಮರ್ಥರಾಗಿಲ್ಲ. ಇಂತಹ ಶೋಚನೀಯ ಪರಿಸ್ಥಿತಿಗೆ ಸಂಪತ್ತು ಆದಾಯಗಳ ವಿತರಣೆಯಲ್ಲಿರುವ ಅಪಾರ ಅಸಮಾನತೆ ಎಂದು ವಿಶ್ವಸಂಸ್ಥೆಯ ವಿಶೇಷ ಅಂಗಸಂಸ್ಥೆಯ ಸಮೀಕ್ಷೆಯು ತಿಳಿಸಿದೆ. ಪ್ರಪಂಚದ ಶೇ. 10ರಷ್ಟು ಜನಸಂಖ್ಯೆ ಇರುವ ಅಭಿವೃದ್ಧಿ ಹೊಂದಿದ ಶ್ರೀಮಂತ ರಾಷ್ಟ್ರಗಳು ಪ್ರಪಂಚದ 80ರಷ್ಟು ಸಂಪತ್ತನ್ನು ಪಡೆದಿರುವುದಾಗಿ, ಶೇ. 90ರಷ್ಟು ಜನಸಂಖ್ಯೆ ಇರುವ ಅಭಿವೃದ್ಧಿ ಹೊಂದುತ್ತಿರುವ ಬಡದೇಶಗಳು ಪ್ರಪಂಚದ ಶೇ. 20ರಷ್ಟು ಸಂಪತ್ತನ್ನು ಹೊಂದಿರುವುದಾಗಿ ವಿಶದಿಸಲಾಗಿದೆ. ಪ್ರಪಂಚದ 40 ಅತ್ಯಂತ ಬಡದೇಶಗಳಲ್ಲಿ 36 ಬಡದೇಶಗಳು ಯೂರೋಪ್, ಅಮೇರಿಕಾದ ಶ್ರೀಮಂತ ರಾಷ್ಟ್ರಗಳಿಗೆ ಆಹಾರಧಾನ್ಯಗಳನ್ನು ಪೌಷ್ಟಿಕ ವಸ್ತುಗಳನ್ನು ಅನಿವಾರ್ಯವಾಗಿ ರಫ್ತು ಮಾಡುತ್ತಿವೆ!

### ಬಡತನವೇ ಜನಸಂಖ್ಯೆ ಹೆಚ್ಚಳಕ್ಕೆ ಕಾರಣ

ಮೇಲಿನ ಸಮೀಕ್ಷೆಯಿಂದ ತಿಳಿದು ಬರುವುದೇನೆಂದರೆ, ಜಾಗತಿಕ ಮಟ್ಟದಲ್ಲಿಯೂ ಬಡತನಕ್ಕೆ ಕಾರಣ ಜನಸಂಖ್ಯೆ ಹೆಚ್ಚಳವಲ್ಲ; ಬದಲು, ಸಂಪತ್ತಿನ ಆದಾಯದ ಅಸಮಾನತೆಯೇ ಕಾರಣ. ಅಂದರೆ, ಜನಸಂಖ್ಯೆ ಹೆಚ್ಚಳವು ಬಡತನಕ್ಕೆ ಕಾರಣವಾಗಿರದೆ, ಬಡತನ ಅಸಮಾನತೆಗಳೇ ಜನಸಂಖ್ಯೆ ಹೆಚ್ಚಳಕ್ಕೆ ಕಾರಣ. ಆಸ್ತಿ ಆದಾಯಗಳ ವಿತರಣೆಯಲ್ಲಿ ಅಸಮಾನತೆ ಹೋಗಲಾಡಿಸಿದರೆ. ಜನರ ಉತ್ಪಾದನಾ ಶಕ್ತಿಗಳು ವಿಕಸಿತಗೊಳ್ಳುವುವು. ಉತ್ಪಾದನೆ ಇನ್ನಷ್ಟೂ ಹೆಚ್ಚುವುದು. ಜೀವನ ಮಟ್ಟವೂ ಉತ್ತಮಗೊಳ್ಳುವುದು, ಶೈಕ್ಷಣಿಕ ಸಾಂಸ್ಕೃತಿಕ ಮಟ್ಟ ಹೆಚ್ಚುವುದು, ಪರಿಣಾಮವಾಗಿ ಜನಸಂಖ್ಯಾ ಹೆಚ್ಚಳದ ದರವು ಇಳಿಮುಖವಾಗುವುದು.

ಬಂಡವಾಳಶಾಹಿಗಳು ಮತ್ತವರ ವಿಶೇಷ ತಜ್ಞರು-ಅಭಿನವ ಮಾಲ್ತಸ್‌ರು ಈ ಸತ್ಯ ಹೇಳಲು ಹೆದರುತ್ತಾರೆ! ಕಾರಣ, ಜನಸಂಖ್ಯಾ ನಿಯಂತ್ರಣಕ್ಕೂ ಬಡತನ ನಿವಾರಣೆಗೂ 20ನೇ ಶತಮಾನದ ಕೊನೆಯ ಭಾಗದಲ್ಲಿ ಸಮಾಜವಾದಿ ಮಾರ್ಗ ಒಂದೇ ಇರುವುದು. ಜನಸಂಖ್ಯೆಗೂ ಮೀರಿ ಉತ್ಪಾದನೆ ಒದಗಿಸಬಲ್ಲ ಬಂಡವಾಳಶಾಹಿ ಪದ್ಧತಿಯು ಈಗ ಅವಸಾನದ ಹಂತದಲ್ಲಿದೆ. ಕಾರಣ ಉತ್ಪಾದನೆಯ ವಿತರಣೆಯಲ್ಲಿ ಸಾಮಾಜಿಕ ನ್ಯಾಯ ದೊರಕಿಸಿಕೊಡಲು ಬಂಡವಾಳಶಾಹಿ ಪದ್ಧತಿಯು ವಿಫಲವಾಯಿತು. ಸಮಾಜವಾದಿ ಪದ್ಧತಿಯು ಅಧಿಕ ಉತ್ಪಾದನೆಗೂ ನ್ಯಾಯಯುತ ವಿತರಣೆಗೂ ಯೋಗ್ಯ ಅವಕಾಶಕೊಡುವುದರಲ್ಲಿ, ಪ್ರಪಂಚದಲ್ಲಿ ಇಷ್ಟರಲ್ಲಿಯೇ ಮೂರನೇ ಒಂದು ಭಾಗದಲ್ಲಿ ಅತ್ಯಂತ ಯಶಸ್ವಿಯಾಗಿದೆ. ಆದುದರಿಂದ ಬಂಡವಾಳಶಾಹಿ ಪಕ್ಷಪಾತಿಗಳು ಸಾಮಾಜಿಕ ಬದಲಾವಣೆಗೆ ಹೆದರಿ, ಬಡತನಕ್ಕೆ ಜನಸಂಖ್ಯೆಯೇ ಕಾರಣ, ಜನಸಂಖ್ಯೆ ನಿಯಂತ್ರಿಸದಿದ್ದರೆ ಸರ್ವನಾಶವಾಗುವುದೆಂದು 200 ವರ್ಷಗಳ ಹಿಂದೆ ಮಾಲ್ತಸ್ ಹೇಳಿದಂತೆ ಬೊಬ್ಬಿಡುತ್ತಿದ್ದಾರೆ!

ಭಾರತದ ನೆಲ, ಜಲ, ಕಾಡು, ಖನಿಜ ಇತ್ಯಾದಿ ಸಂಪತ್ತುಗಳು ಅಮೇರಿಕಾ, ರಷ್ಯಾ, ಚೀನಾ ಮತ್ತಿತರ ದೇಶಗಳಿಗಿಂತ ಕಡಿಮೆ ಇಲ್ಲ. ಇಲ್ಲಿನ ನೈಸರ್ಗಿಕ ಸಂಪತ್ತುಗಳನ್ನು ವಿಜ್ಞಾನ, ತಂತ್ರಜ್ಞಾನಗಳಿಂದ ಸಾಕಷ್ಟು ಬಳಕೆಗೆ ತಂದುಕೊಂಡರೆ ಈಗಿನ ಜನಸಂಖ್ಯೆಯ ಹತ್ತಾರು ಪಾಲು ಹೆಚ್ಚು ಜನಸಂಖ್ಯೆಗೆ ಅನ್ನ, ವಸ್ತ್ರ, ವಸತಿ, ಆರೋಗ್ಯ, ಶಿಕ್ಷಣ ಒದಗಿಸಲು ಸಾಧ್ಯವಿದೆ. ಇದಕ್ಕೆ ಪೂರ್ವಭಾವಿಯಾಗಿ ಕೃಷಿ ಹಾಗೂ ಕೈಗಾರಿಕಾ ಕ್ಷೇತ್ರಗಳಲ್ಲಿನ ಉತ್ಪಾದನಾ ಸಂಬಂಧದಲ್ಲಿ ಅಸಮಾನತೆ, ಶೋಷಣೆ ಹೋಗಲಾಡಿಸುವ ಕ್ರಾಂತಿಕಾರಕ ಬದಲಾವಣೆ ಆದರೆ ಮಾತ್ರ ಉತ್ಪಾದನೆ ಹೆಚ್ಚಿ ನ್ಯಾಯವಿತರಣೆ ನಡೆದು ಜನರ ಬಡತನ ನಿವಾರಣೆ ಆದೀತು. ಕ್ರಮೇಣ ಜನಸಂಖ್ಯೆಯ ನಿಯಂತ್ರಣವೂ ಸಾಧ್ಯವಾದೀತು. ಬದಲು, ಜನಸಂಖ್ಯೆ ನಿಯಂತ್ರಣ ಕಾರ್ಯಕ್ರಮವನ್ನೇ ಮುಂದಾಗಿಟ್ಟುಕೊಂಡರೆ, ಕುದುರೆಗಿಂತ ಹುರುಳಿ ಮುಂದೆ ಎಂದು ತಾದೀತು. ●

## ಧರ್ಮ ರಾಷ್ಟ್ರದ ಆಧಾರವಲ್ಲ

[4ನೇ ಪುಟದಿಂದ]

ಪ್ರಭಾವಯುತವಾಗಿ ಎದುರಿಸಲು ನಮ್ಮ ಆಲೋಚನೆ ಸ್ಪಷ್ಟವಾಗಿರಬೇಕು. ವಿವಿಧ ರಾಷ್ಟ್ರೀಯ ಸಮುದಾಯಗಳ ಸಮಾನ ಸ್ವಾತಂತ್ರ್ಯ ಮತ್ತು ಹಕ್ಕುಗಳಿಂದ ಮಾತ್ರ ದೇಶದ ಐಕ್ಯತೆಯನ್ನು ಸಾಧಿಸಬಹುದು. 1946ರಲ್ಲಿ ರಾಷ್ಟ್ರೀಯ ಕಾಂಗ್ರೆಸ್ ಚುನಾವಣಾ ಪ್ರಣಾಳಿಕೆಯಲ್ಲಿ ಈ ವಿಚಾರಗಳು ಸ್ಪಷ್ಟವಾಗಿವೆ. ಸಂವಿಧಾನದತ್ತ ಮೂಲಭೂತ ಹಕ್ಕುಗಳನ್ನಾಧರಿಸಿ ಸ್ವತಂತ್ರ ಜನತಾಂತ್ರಿಕ ಸರ್ಕಾರವಿರಬೇಕು. ಸಂವಿಧಾನವು ಫೆಡರಲ್ ತತ್ವಗಳನ್ನಾಧರಿಸಿರಬೇಕು. ಮತ್ತು ಒಕ್ಕೂಟದ ಎಲ್ಲ ರಾಜ್ಯಗಳಲ್ಲೂ ಚುನಾಯಿತ ಶಾಸನಸಭೆಗಳಿರಬೇಕು. ಒಕ್ಕೂಟದ ಭಾಗಗಳಿಗೆ ಹೆಚ್ಚಿನ ಅಧಿಕಾರ ನೀಡಲು ಕೇಂದ್ರಕ್ಕೆ ಕೆಲವೇ ಸಮಾನ ವಿಷಯಗಳ ಮೇಲೆ ಅಧಿಕಾರ ನೀಡಬೇಕು. ಈ ಅಂಶಗಳನ್ನು ಕಾಂಗ್ರೆಸ್ಸಿನ ಚುನಾವಣಾ ಪ್ರಣಾಳಿಕೆಯಲ್ಲಿ ಕಾಣಬಹುದು.

### ಐಕ್ಯತೆಗೆ ಧಕ್ಕೆ

ಕಾಂಗ್ರೆಸ್ ಪಕ್ಷದ ಚುನಾವಣಾ ಪ್ರಣಾಳಿಕೆಯಲ್ಲಿ ಈ ಎಲ್ಲ ವಿಚಾರ ಗೆದ್ದರೂ ಅಧಿಕಾರಕ್ಕೆ ಬಂದನಂತರ ಎಲ್ಲ ಭರವಸೆಗಳನ್ನು ಗಾಳಿಗೆತೂರಿತು, ಈ ಸಮಸ್ಯೆಗೆ ಆಳುವವರ್ಗಗಳು ಹೊಸ ತಿರುವು ಕೊಡಲು ಪ್ರಯತ್ನಿಸುತ್ತಿವೆ. ಜಾತೀಯ, ಪ್ರಾದೇಶಿಕ ಮತ್ತು ಮತಾಂಧ ಭಾವನೆಗಳಿಗೆ ಉತ್ತೇಜನ ಕೊಡುತ್ತಿವೆ. ಈ ಜನವಿರೋಧಿ ಶಕ್ತಿಗಳ ವಿರುದ್ಧ ಎಡ ಮತ್ತು ಪ್ರಜಾಪ್ರಭುತ್ವ ಶಕ್ತಿಗಳು ಜನಾಭಿಪ್ರಾಯವನ್ನು ರೂಪಿಸಬೇಕಾಗಿದೆ. ಈ ಎಲ್ಲ ಪ್ರತ್ಯೇಕತಾವಾದಿಗಳನ್ನು ವಿರೋಧಿಸಿ ರಾಜ್ಯಗಳ ನೈಜ ಸ್ವಾಯತ್ತತೆಗಾಗಿ ಹೋರಾಡಬೇಕಾಗಿದೆ. ಜಾತೀಯ ಹಾಗೂ ವಿಚ್ಛಿದ್ರಕಾರಿ ಶಕ್ತಿಗಳಾದ ಆರ್.ಎಸ್.ಎಸ್., ಜಮಾತ್-ಇ-ಇಸ್ಲಾಮಿ, ಸಿಖ್ ಖಲೀಸ್ತಾನ ಚಳುವಳಿಗಳಿಗೆ ಸಾಮ್ರಾಜ್ಯಶಾಹಿಗಳು ಎಲ್ಲ ಬಗೆಯ ನೆರವು ನೀಡುತ್ತಿವೆ. ಎಡ ಮತ್ತು ಪ್ರಜಾಪ್ರಭುತ್ವವಾದಿಗಳ ಐಕ್ಯತೆಯನ್ನು ಸಾಮ್ರಾಜ್ಯಶಾಹಿಗಳು ಸಹಿಸುವುದಿಲ್ಲ.

ಬಂಡವಾಳಶಾಹಿ ಬೆಳವಣಿಗೆಯಿಂದುಂಟಾದ ಜನತೆಯ ಅಸಮಾಧಾನವು ಇಂತಹ ವಿನಾಶಕಾರಿ ಮಾರ್ಗಗಳಲ್ಲಿ ತೊಡಗುವಂತೆ ಪ್ರಯತ್ನಿಸಲಾಗುತ್ತಿದೆ. ಈ ಬೆಳವಣಿಗೆಯನ್ನು ಎಡ ಮತ್ತು ಪ್ರಜಾಪ್ರಭುತ್ವ ಶಕ್ತಿಗಳು ಕಡೆಗಣಿಸುವಂತಿಲ್ಲ. ಇದು ಕೇವಲ ದುಡಿಯುವವರ್ಗದ ಐಕ್ಯತೆಗಲ್ಲದೆ ಇಡೀ ದೇಶದ ಐಕ್ಯತೆಗೇ ಮಾರಕವಾಗಿದೆ.

### ಅಗತ್ಯದ ಕೆಲಸ

ಎಡ ಮತ್ತು ಪ್ರಜಾಪ್ರಭುತ್ವವಾದಿ ಶಕ್ತಿಗಳು ಜರೂರಾಗಿ ಮಾಡಬೇಕಾದ ಕೆಲಸವೆಂದರೆ ಈ ಎಲ್ಲ ವಿಚ್ಛಿದ್ರಕಾರಿ ಶಕ್ತಿಗಳ ಕರಾಳರೂಪವನ್ನು ಬಯಲು ಮಾಡುವುದು. ರಾಷ್ಟ್ರೀಯತೆಯ ಸಮಸ್ಯೆಗೆ ಬೂರ್ಜ್ವಾ ರಾಜ್ಯದಲ್ಲಿ ಪರಿಹಾರ ಕಂಡುಹಿಡಿಯುವುದು ಸಾಧ್ಯವಿಲ್ಲದ ಕೆಲಸ. ಸೋವಿಯತ್ ಒಕ್ಕೂಟ ಹಾಗೂ ಇನ್ನಿತರ ಸಮಾಜವಾದಿ ದೇಶಗಳಲ್ಲಿ ಮಾತ್ರ ರಾಷ್ಟ್ರೀಯತೆಯ ಸಮಸ್ಯೆಯನ್ನು ಬಗೆಹರಿಸಿ ಎಲ್ಲ ರಾಷ್ಟ್ರೀಯರಿಗೂ ಸಮಾನ ಅವಕಾಶ ಸ್ವಾತಂತ್ರ್ಯಗಳು ಕೊಡಲ್ಪಟ್ಟಿವೆ. ಆದರೆ ಸದ್ಯದಲ್ಲಿ ಈ ಸಮಸ್ಯೆಗೆ ಅಂತಿಮ ಪರಿಹಾರ ಯೋಚಿಸುವಂತಿಲ್ಲ. ಸದ್ಯದಲ್ಲಿ ಧರ್ಮ–ಭಾಷೆಯನ್ನಾಧರಿಸಿದ ರಾಷ್ಟ್ರೀಯತೆಯ ವಿವಿಧ ಸಿದ್ಧಾಂತಗಳ ಪೊಳ್ಳನ್ನು ಬಯಲುಮಾಡಿ ಅದರ ಹಿಂದಿರುವ ಕರಾಳ ಉದ್ದೇಶಗಳನ್ನು ಜನತೆಗೆ ತಿಳಿಸಬೇಕಾಗಿದೆ. ಜಾತ್ಯಾತೀತತೆ ಮತ್ತು ಧರ್ಮದಿಂದ ಪ್ರತ್ಯೇಕಿಸಿದ ರಾಜ್ಯ ಮತ್ತು ರಾಜಕೀಯದ ಪ್ರಾಮುಖ್ಯತೆಯನ್ನು ಎತ್ತಿ ಹಿಡಿಯಬೇಕಾಗಿದೆ. ○

## ದ.ಕ. ಜಿಲ್ಲೆಯ ಅಂಗವಿಕಲರಿಗೆ ಮಾಸಾಶನ

ಕರ್ನಾಟಕ ರಾಜ್ಯ ಅಂಗವಿಕಲರ ಕ್ಷೇಮಾಭಿವೃದ್ಧಿ ಸಂಘ (ರಿ)ದ ಜಿಲ್ಲಾ ಶಾಖೆಯು ದ. ಕ. ಜಿಲ್ಲೆಯ ಅಂಗವಿಕಲರಿಗೆ ಮಾಸಾಶನ ನೀಡುವ ಕಾರ್ಯಕ್ರಮವನ್ನು ಜೂನ್ 7ರಂದು ಮಂಗಳೂರಲ್ಲಿ ನಡೆಯಿಸಿತು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ರಾಜ್ಯ ಸಂಘದ ಅಧ್ಯಕ್ಷರಾದ ಶ್ರೀ ಎಲ್ಲೂರು ಉಮೇಶ ರಾವ್ ಅವರು ವಹಿಸಿದ್ದರು.

ಮೊದಲು ಶಾಖೆಯ ಕಾರ್ಯದರ್ಶಿ ಶ್ರೀ ಎಂ. ವಿಶ್ವನಾಥ ಅವರು ಸ್ವಾಗತಿಸಿದರು.

ಶಾಖೆಯ ಅಧ್ಯಕ್ಷರಾದ ಶ್ರೀ ಗೋವಿಂದಶಾಸ್ತ್ರಿಯವರು ಅಂಗವಿಕಲರಿಗೆ ಶಾಖೆಯು ನಿಯೋಜಿಸಿರುವ ಯೋಜನೆಗಳನ್ನು ವಿವರಿಸಿದರು.

ಸುಮಾರು 89 ಅಂಗವಿಕಲರ ಮಾಸಾಶನದ ಅರ್ಜಿಗಳನ್ನು ಸ್ವೀಕರಿಸಿ ಸಂಬಂಧಿಸಿದ ಅಧಿಕಾರಿಗಳಿಗೆ ಕಳುಹಿಸಲಾಯಿತು. ಮಾಸಾಶನಕ್ಕೆ ಅರ್ಜಿ ಸಲ್ಲಿಸಿದ್ದರೂ ಮಾಸಾಶನ ಸಿಗದವರ ಕುರಿತು ಕೂಡಲೇ ಮಾಸಾಶನ ದೊರಕಿಸಲು ಸಂಬಂಧಿಸಿದ ಅಧಿಕಾರಿಗಳಿಗೆ ವಿನಂತಿಸಲಾಯಿತು.

ರಾಜ್ಯ ಸಂಘದ ಸಂಘಟನಾ ಕಾರ್ಯದರ್ಶಿ ಶ್ರೀ. ಬಾ. ಸಾಮಗ ಮಲ್ಪೆ ಅವರು ಮಾಸಾಶನ ಸಿಗದ ಅಂಗವಿಕಲರು ಜಿಲ್ಲಾ ಶಾಖೆಯನ್ನು ಸಂಪರ್ಕಿಸಬೇಕೆಂದರು. ಕೊನೆಯಲ್ಲಿ ಶಾಖೆಯ ಸಂಚಾಲಕರಾದ ಶ್ರೀ ಪಿ.ಆರ್. ಬೋಳೂರ್ ಅವರು ವಂದಿಸಿದರು. ●

## ಯೂನಿಯನ್ ಕಟ್ಟಡದ ಉದ್ಘಾಟನೆ

ಬಿಣಗಾ ಕಾಸ್ಟಿಕ್‌ಸೋಡಾ ಕಾರ್ಮಿಕಸಂಘದ ಹೊಸ ಕಟ್ಟಡದ ಉದ್ಘಾಟನೆಯನ್ನು 12-6-81 ರಂದು ಬಿಣಗಾದಲ್ಲಿ ನೆರವೇರಿಸಲಾಯಿತು. ಸಮಾರಂಭಕ್ಕೆ ಅಧ್ಯಕ್ಷರಾಗಿ ಶ್ರೀ ಬಿ. ಎಸ್. ನಾರಾಯಣ ಹಾಗೂ ಮುಖ್ಯ ಅತಿಥಿಗಳಾಗಿ ಶ್ರೀ ಸಕ್ಸೇನಾ ಆಗಮಿಸಿದ್ದರು.

ಕಾಂ. ಎಸ್. ಎನ್. ನಾಯಕ್‌ರು ಸ್ವಾಗತಿಸಿದರು. ಸಂಘದ ಅಧ್ಯಕ್ಷರಾದ ಕಾಂ. ಆರ್. ಜಿ. ಸ್ಥಳೇಕರರು ಸಭೆಯನ್ನುದ್ದೇಶಿಸಿ ಮಾತನಾಡಿದರು. ಕೊನೆಯಲ್ಲಿ ಕಾಂ. ಕೃಷ್ಣಪ್ಪ ವಂದಿಸಿದರು. ○

# ಪ್ರೆಸ್ ಕಾರ್ಮಿಕರ ಮತ್ತು ಮಾಲಕರ ನಡುವೆ ಒಪ್ಪಂದ

ದ.ಕ. ಜಿಲ್ಲಾ ಪ್ರೆಸ್ ಕಾರ್ಮಿಕರು ಎಸ್. ಕೆ. ಪ್ರೆಸ್ ವರ್ಕರ್ಸ್ ಯೂನಿಯನ್ನಿನ ಮೂಲಕ ಪ್ರೆಸ್ ಮಾಲಕರ ಮುಂದೆ ವೇತನ ಹೆಚ್ಚಳ, ತುಟ್ಟಿಭತ್ತೆ ಇತ್ಯಾದಿ ಬೇಡಿಕೆಗಳನ್ನಿಟ್ಟಿದ್ದರು.

ಮಜೂರರ ಈ ಬೇಡಿಕೆಗಳ ಬಗ್ಗೆ ದ.ಕ. ಮಾಸ್ಟರ್ಸ್ ಪ್ರಿಂಟರ್ಸ್ ಅಸೋಸಿಯೇಷನ್ ಹಾಗೂ ಎಸ್. ಕೆ. ಪ್ರೆಸ್ ವರ್ಕರ್ಸ್ ಯೂನಿಯನ್ನಿನ ಪ್ರತಿನಿಧಿಗಳ ನಡುವೆ ಹಲವು ಸುತ್ತಿನ ಮಾತುಕತೆ ನಡೆದು ಕೊನೆಗೆ ಈ ಕೆಳಕಂಡಂತೆ ಮೂರು ವರ್ಷಗಳ ಒಪ್ಪಂದಕ್ಕೆ ಬರಲಾಯಿತು.

1. ಪ್ರಥಮ ವರ್ಷದಲ್ಲಿ (1-4-81ರಿಂದ) ಪ್ರೆಸ್ ಕೆಲಸಗಾರರ ಹಾಲಿ ಇರುವ ಮೂಲವೇತನಕ್ಕೆ 22.5% ಹೆಚ್ಚಳದಂತೆಯೂ, ಎರಡನೇ ವರ್ಷಕ್ಕೆ (1-4-82ರಿಂದ) ಮೂಲ ವೇತನದಲ್ಲಿ 11% ಹೆಚ್ಚಳದಂತೆಯೂ ಹಾಗೂ ಮೂರನೇ ವರ್ಷಕ್ಕೆ (1-4-83ರಿಂದ) ಮೂಲವೇತನದಲ್ಲಿ 11% ಹೆಚ್ಚಳದಂತೆಯೂ ಅಲ್ಲಿದೆ.

2. ಈಗ ಇರುವ ಎಲವೆನ್ಸ್‌ನಲ್ಲಿ 45% ಮೊದಲನೇ ವರ್ಷವೂ ಉಳಿದ ಎಲವೆನ್ಸ್‌ನಲ್ಲಿ 50% 2ನೇ ವರ್ಷವೂ, ಉಳಿದ ಎಲ್ಲಾ ಎಲವೆನ್ಸ್‌ನ್ನು ಮೂರನೇ ವರ್ಷವೂ ಮೂಲವೇತನಕ್ಕೆ ಸೇರಿಸಲು ಒಪ್ಪಂದವಾಯಿತು.

ಮಂಗಳೂರು ಮೊದಲನೇ ಸಬ್-ಡಿವಿಜನ್ನಿನ ಲೇಬರ್ ಆಫೀಸರರ ಮುಂದೆ ಆದ ಈ ಒಪ್ಪಂದಕ್ಕೆ ಕಾರ್ಮಿಕರ ಪರವಾಗಿ ಶ್ರೀ ಪಿ. ರಾಮಚಂದ್ರ ರಾವ್, ಶ್ರೀ ಕೆ. ಮುಸಬ್ಬ, ಶ್ರೀ ಬಿ. ಉಮಾನಾಥ ಮತ್ತು ಶ್ರೀ ಬಿ. ಭುಜಂಗ ಮಾರ್ಲರು ಸಹಿಹಾಕಿದ್ದಾರೆ.

ಈ ಒಪ್ಪಂದದ ಪ್ರಕಾರ ದ. ಕ. ಜಿಲ್ಲೆಯ ಹೆಚ್ಚಿನ ಪ್ರೆಸ್ ಕಾರ್ಮಿಕರಿಗೆ ಪ್ರಯೋಜನ ಸಿಗಲಿದ್ದು ರಾಜ್ಯದ ಎಲ್ಲಾ ಪ್ರೆಸ್ ಕಾರ್ಮಿಕರು ಸಂಘಟಿತರಾಗಿ ಇದೇ ರೀತಿಯ ಸವಲತ್ತುಗಳನ್ನು ಪಡೆಯಲು ಮುಂದಾಗಬೇಕೆಂದು ಯೂನಿಯನ್ನಿನ ಕಾರ್ಯದರ್ಶಿ ಶ್ರೀ ಬಿ. ಭುಜಂಗ ಮಾರ್ಲರು ಪ್ರೆಸ್ ಕಾರ್ಮಿಕರಿಗೆ ವಿನಂತಿಸಿದ್ದಾರೆ.

○

## ರಾಜ್ಯ ಸೆಕ್ರೆಟಾರಿಯೇಟ್ ಹೇಳಿಕೆ

[1ನೇ ಪುಟದಿಂದ]

ಮುಖ್ಯಪಟ್ಟ ಪೋಲೀಸ್ ಅಧಿಕಾರಿಗಳ ಗುಣನಡತೆ ಬಗ್ಗೆ ಸಂಶಯ ಉಂಟಾಗಿದೆ.

ಜನವಿರೋಧಿ ಮತ್ತು ಪ್ರಜಾಪ್ರಭುತ್ವ ವಿರೋಧಿ ಸುಗ್ರೀವಾಜ್ಞೆಗಳು, ವಿರೋಧ ಪಕ್ಷಗಳನ್ನು ದುರ್ಬಲಗೊಳಿಸುವ ದೃಷ್ಟಿಯಿಂದ ಆಡಳಿತ ಪಕ್ಷವು ಪ್ರೋತ್ಸಾಹಿಸುತ್ತಾ ಬಂದಿರುವ ಪಕ್ಷಾಂತರದ ಪಿಡುಗು, ಕೊನೆಗೆ ಇದೀಗ ವಿರೋಧ ಪಕ್ಷದ ಶಾಸಕರನ್ನು ಈ ಸಭೆಯು ಮುಗಿಯುವತನಕ ಅಮಾನತುಗೊಳಿಸಿರುವುದು-ಇವೆಲ್ಲಾ ಪ್ರಜಾಪ್ರಭುತ್ವ ವಿರೋಧಿ ಮತ್ತು ಸರ್ವಾಧಿಕಾರಿ ಕ್ರಮಗಳಾಗಿವೆ. ಇವೆಲ್ಲದರೊಂದಿಗೆ ಕಳೆದ ಜುಲೈಯಿಂದೀಚೆಗೆ ರಾಜ್ಯದ ಗುಂಡೂರಾವ್ ಸರಕಾರ ನಿರಪರಾಧಿ ಜನರ ಜೀವ ತೆಗೆದುಕೊಳ್ಳುವುದರಲ್ಲಿ ಮಾಡಿದ ಸಾಧನೆಯನ್ನು ಸೇರಿಸಬೇಕು.

ಅರುಣ ಶೌರಿಯವರ ವರದಿ ಮತ್ತು ಅದರಿಂದಾಗಿ ಬಂದಿರುವ ಪ್ರತಿಕ್ರಿಯೆ ಕಾಂಗ್ರೆಯ ಒಳ ಚಿತ್ರವನ್ನು ಎತ್ತಿ ತೋರಿಸಿವೆ. ರಾಜ್ಯದ ಮುಖ್ಯಮಂತ್ರಿಯವರು ತಿಳಿಗೇಡಿ ಎಂದು ಅರ್ಥ ಬರುವಂತೆ ಜಾಫರ್ ಷರೀಫ್ ಅವರು ಹೇಳಿರುವ "ಅವಿವೇಕಿ ಮಿತ್ರನಿಗಿಂತ ಚೆನ್ನಾಗಿ ಗೊತ್ತಿರುವ ಶತ್ರುವೇ ವಾಸಿ" ಎಂಬ ಮಾತು ನಿಜ ಚಿತ್ರವನ್ನು ಬಯಲು ಮಾಡಿದೆ. ಎಫ್. ಎಂ. ಖಾನ್, ನಿಜಾಮುದ್ದೀನ್ ಮೊದಲಾದವರು ಸೇರಿರುವ ದುಷ್ಟಕೂಟವೊಂದರ ಸಹಾಯದಿಂದ ಅವಿವೇಕಿ ಮುಖ್ಯಮಂತ್ರಿಯವರು ಹಾನಿ ಎಸಗುತ್ತಿದ್ದಾರೆ ಎಂಬುದಾಗಿ ಕಾಂಗ್ರೆಯ ಅನೇಕ ಮಂದಿ ಹೇಳುತ್ತಲಿದ್ದಾರೆ.

ಈ ಪರಿಸ್ಥಿತಿಯಲ್ಲಿ ಜನಾಭಿಪ್ರಾಯವನ್ನು ಮೂಡಿಸಿ, ತಪ್ಪು ಧೋರಣೆಗಳು ಮತ್ತು ತಪ್ಪಿತಸ್ಥ ವ್ಯಕ್ತಿಗಳ ವಿರುದ್ಧ ಹೋರಾಡುವುದರ ಹೊರತು ವಿರೋಧ ಪಕ್ಷಗಳಿಗೆ ಅನ್ಯಮಾರ್ಗವಿಲ್ಲ. ಕೇವಲ ಇಬ್ರಾಹಿಂ ರಾಜೀನಾಮೆಯ ಪ್ರಶ್ನೆಯೊಂದೇ ಅಲ್ಲದೆ ಇತರ ಬೇಡಿಕೆಗಳನ್ನೂ ಸೇರಿಸಿಕೊಂಡು ತತ್ವಬದ್ಧ ಹೋರಾಟವನ್ನು ನಡೆಸಬೇಕಾಗಿದೆ. ಎಡ ಮತ್ತು ಪ್ರಜಾಪ್ರಭುತ್ವ ಶಕ್ತಿಗಳು ಒಂದುಗೂಡಿ, ಹೋರಾಟಗಳಿಗೆ ನೇತೃತ್ವ ನೀಡುವುದರಿಂದ ಮಾತ್ರ ಇದು ಸಾಧ್ಯ. ವಿರೋಧ ಪಕ್ಷಗಳು ಸಂಘಟಿಸಲು ಯೋಚಿಸಿರುವ ಪ್ರತಿಭಟನೆಗೆ ಬೆಂಬಲ ಕೊಡುವುದರೊಂದಿಗೆ, ಎಡ ಪ್ರಜಾಪ್ರಭುತ್ವ ಶಕ್ತಿಗಳನ್ನು ಒಗ್ಗೂಡಿಸುವುದಕ್ಕೂ ಮತ್ತು ಇನ್ನೂ ವಿಶಾಲ ವ್ಯಾಪ್ತಿಯ ಬೇಡಿಕೆಗಳನ್ನು ಸೇರಿಸಿಕೊಂಡು ಜನತೆಯ ಅಭಿಪ್ರಾಯವನ್ನು ರೂಪಿಸುವುದಕ್ಕೂ ಮತ್ತು ಹೋರಾಟವನ್ನು ನಡೆಸಲು ಸಿ.ಪಿ.ಐ.(ಎಂ) ರಾಜ್ಯ ಸೆಕ್ರೆಟಾರಿಯೆಟ್ ಕರೆ ನೀಡಿದೆ.

○

## ಬೃಹತ್ ಮತಪ್ರದರ್ಶನ

ಮೋಟಾರ್ ಟ್ರಾನ್ಸ್‌ಪೋರ್ಟ್ ಮತ್ತು ಇಂಜಿನಿಯರಿಂಗ್ ವರ್ಕರ್ಸ್ ಯೂನಿಯನ್ (ಸಿ. ಐ. ಟಿ. ಯು.)ನ ಕರೆಯ ಅನುಗುಣವಾಗಿ ಜೂನ್ 15ರಂದು ಮಂಗಳೂರಿನ ಡಿ. ಸಿ. ಆಫೀಸೆದುರು ಚಾಲಕರು ಮತ್ತು ಕಂಡಕ್ಟರರು ಬೃಹತ್ ಮತಪ್ರದರ್ಶನ ನಡೆಸಿದರು. ಮಂಗಳೂರು ಸಿಟಿ ವಾಹನ ಸಂಚಾರ ಅಂದು ಬೆಳಿಗ್ಗೆ 11ರಿಂದ ಮಧ್ಯಾಹ್ನ 3 ಘಂಟೆಯವರೆಗೆ ಸಂಪೂರ್ಣ ಸ್ಥಗಿತವಾಗಿತ್ತು.

ಮತಪ್ರದರ್ಶನದ ನಂತರ ಯೂನಿಯನ್‌ನ ಅಧ್ಯಕ್ಷರಾದ ಕಾಂ. ಪಿ. ರಾಮಚಂದ್ರರಾವ್, ಪ್ರಧಾನಕಾರ್ಯದರ್ಶಿ ಕಾಂ. ಕೆ. ಮುಸಬ್ಬ ಇವರನ್ನೊಳಗೊಂಡ ನಿಯೋಗವೊಂದು ಜಿಲ್ಲಾಧಿಕಾರಿಯ ಆಪ್ತಕಾರ್ಯದರ್ಶಿಯನ್ನು ಭೇಟಿಯಾಗಿ ಬೇಡಿಕೆಗಳನ್ನೊಳಗೊಂಡ ಮನವಿಪತ್ರವನ್ನು ಸಲ್ಲಿಸಿದರು. ಮತಪ್ರದರ್ಶಕರನ್ನುದ್ದೇಶಿಸಿ ಮಾತನಾಡಿದ ಕಾಂ. ಪಿ. ಆರ್. ರಾವ್ ಮತ್ತು ಕಾಂ. ಮುಸಬ್ಬ ಅವರು ಬೇಡಿಕೆಗಳು ಈಡೇರುವ ತನಕ ಹೋರಾಟ ಮುಂದುವರೆಸಲು ಕರೆ ನೀಡಿದರು.

ಡ್ರೈವರ್ಸ್ ಮತ್ತು ಕಂಡಕ್ಟರ್‌ಗಳ ನ್ಯಾಯವಾದ ಬೇಡಿಕೆಗಳನ್ನು ಕೂಡಲೇ ಸುಮುಖವಾಗಿ ಇತ್ಯರ್ಥಮಾಡುವಂತೆ ಮೋಟಾರ್ ಟ್ರಾನ್ಸ್‌ಪೋರ್ಟ್ ಮತ್ತು ಇಂಜಿನೀಯರಿಂಗ್ ವರ್ಕರ್ಸ್ ಯೂನಿಯನ್ ಕರೆನೀಡಿದೆ.

○

## ಕ್ವಾಲಿಟಿ ಬಿಸ್ಕತ್ ಕಾರ್ಮಿಕರಿಗೆ ವೇತನ ಹೆಚ್ಚಳ

ಬೆಂಗಳೂರಿನ ಮೈಸೂರು ರಸ್ತೆಯಲ್ಲಿರುವ 'ಕ್ವಾಲಿಟಿ ಬಿಸ್ಕಟ್' ಕಾರ್ಖಾನೆಯಲ್ಲಿ ಕಾರ್ಮಿಕರು ಮತ್ತು ಮಾಲೀಕರ ನಡುವೆ ಕೂಲಿ ಹೆಚ್ಚಳ ಮತ್ತಿತರ ಸೌಲಭ್ಯಗಳ ಬಗ್ಗೆ ಒಪ್ಪಂದವಾಗಿದೆ. 19-6-81ರಂದು ಕಾರ್ಮಿಕ ಅಧಿಕಾರಿಯ ಸಮಕ್ಷಮದಲ್ಲಿ ಈ ಒಪ್ಪಂದ ನಡೆಯಿತು.

ಒಪ್ಪಂದದ ರೀತ್ಯ ಪ್ರತಿಯೊಬ್ಬ ಕಾರ್ಮಿಕನಿಗೆ ಕನಿಷ್ಟ 93 ರೂ.ನಿಂದ 113 ರೂ.ವರೆಗೆ ವೇತನದಲ್ಲಿ ಹೆಚ್ಚಳ, ಕ್ಯಾಂಟೀನ್ ಸೌಲಭ್ಯ, ಶೇ. 40ರಷ್ಟು ಸಬ್‌ಸಿಡಿ, 11 ರಜಾ ಸೌಲಭ್ಯ, 45 ದಿನ ಕೆಲಸಮಾಡಿದ ಕಾರ್ಮಿಕರನ್ನು ಖಾಯಂ ಮಾಡುವುದು, ಲಾರಿಚಾಲಕರಿಗೆ ದಿನಭತ್ಯ ಕನಿಷ್ಟ 15ರೂ., ತುಟ್ಟಿ ಭತ್ಯ ಪ್ರತಿ ಪಾಯಿಂಟಿಗೆ 1 ರೂ. 25 ಪೈಸೆಯಂತೆ ಇತ್ಯಾದಿಗಳು ಕಾರ್ಮಿಕರಿಗೆ ದೊರೆತ ಸೌಲಭ್ಯಗಳು.

ಭಾರತದಲ್ಲೇ ಖ್ಯಾತವಾಗಿರುವ ಈ ಕಂಪನಿಯಲ್ಲಿ ಸುಮಾರು 350 ಕಾರ್ಮಿಕರು ಕೆಲಸಮಾಡುತ್ತಿದ್ದಾರೆ. ಕಾರ್ಮಿಕರು ಕಳೆದ ವರ್ಷ ಸಿ.ಐ.ಟಿ.ಯು. ನೇತೃತ್ವದಲ್ಲಿ ಸೇರಿರುವರು.

ಒಪ್ಪಂದಕ್ಕೆ ಕಾರ್ಮಿಕರ ಪರವಾಗಿ ಸಂಘದ ಅಧ್ಯಕ್ಷ ಕಾಂ. ಸೂರ್ಯನಾರಾಯಣರಾವ್, ಪ್ರಧಾನಕಾರ್ಯದರ್ಶಿ ಕಾಂ. ಆರ್. ಶ್ರೀನಿವಾಸ, ಟಿ. ಎಸ್. ಅನಂತರಾಂ, ಚಂದ್ರಶೇಖರ, ಬೀರಣ್ಣ, ಶಂಕ್ರಾಚಾರ್ ಮತ್ತು ಕಾಂ. ಯೋಗಾನಂದ ಇವರುಗಳು ಮಾಲೀಕರ ಪರವಾಗಿ ಶ್ರೀ ಉಮೇಶ ಗುಪ್ತ ಮತ್ತು ಅಜಂತಯ್ಯ ಇವರು ಅಂಕಿತ ಹಾಕಿದ್ದಾರೆ.

●

## ಪುಸ್ತಕ ಮಾರಾಟಕ್ಕಿದೆ

ಬಹುದಿನಗಳ ಬೇಡಿಕೆಯಾಗಿದ್ದ "ಎಸ್. ಎಫ್. ಐ. ಕಾರ್ಯಕ್ರಮ ಮತ್ತು ಸಂವಿಧಾನ"ದ ಕನ್ನಡ ಪ್ರತಿಗಳು ಇದೀಗ ಸಿದ್ಧವಾಗಿದ್ದು ಮಾರಾಟಕ್ಕಿವೆ.

ಅಗತ್ಯವಿರುವವರು ತಮಗೆಬೇಕಾದ ಪ್ರತಿಗಳ ಸಂಖ್ಯೆಯನ್ನು ಮತ್ತು ಒಂದು ಪ್ರತಿಗೆ ತಲಾ 50 ಪೈಸೆಯಂತೆ ಹಣವನ್ನು ಎಸ್. ಎಫ್. ಐ. ರಾಜ್ಯಸಮಿತಿಗೆ ಕಳುಹಿಸಿ ಕೊಡಬೇಕು. ಈ ಕೆಳಗಿನ ವಿಳಾಸಕ್ಕೆ ಮನಿಆರ್ಡರ್ ಮಾಡಲು ಕೋರಿಕೆ.

ಎಸ್. ಆರ್. ಆರಾಧ್ಯ
ಎಲ್-56, ಕೆ. ವಿ. ಟೆಂಪಲ್ ಸ್ಟ್ರೀಟ್
ಬೆಂಗಳೂರು-560053

## ಹುತಾತ್ಮರ ಕುಟುಂಬ ನಿಧಿಗೆ ಉದಾರ ಧನಸಹಾಯ ನೀಡಿ

ಕಾಮ್ರೇಡ್ ಸೋಮಸುಂದರಂ ತಮಿಳುನಾಡಿನ ಮಧುರೈ ಜಿಲ್ಲೆಯ ತ್ಯಾಗರಾಜರ್ ಇಂಜಿನಿಯರಿಂಗ್ ಕಾಲೇಜಿನ ಎಸ್.ಎಫ್.ಐ. ಶಾಖೆಯ ಕಾರ್ಯದರ್ಶಿಯಾಗಿದ್ದರು. ಕಾಂ. ಜಂಬುಲಿಂಗಂ ಇದೇ ಕಾಲೇಜಿನ ವಿದ್ಯಾರ್ಥಿ ಸಂಘದ ಸಹಕಾರ್ಯದರ್ಶಿಯಾಗಿದ್ದರು. ಜನಪ್ರಿಯ ವಿದ್ಯಾರ್ಥಿ ಮುಖಂಡರಾಗಿದ್ದ ಈ ಇಬ್ಬರು ಸಂಗಾತಿಗಳನ್ನೂ ಮಾರ್ಚ್ 31 ರಂದು ಡಿ. ಎಂ. ಕೆ. ನೇತೃತ್ವದಲ್ಲಿ ಕೆಲವು ಜಾತೀವಾದಿ ಗೂಂಡಾ ಶಕ್ತಿಗಳು ಅಮಾನುಷವಾಗಿ ಕೊಲೆಗೈದರು. ಪ್ರಜಾಸತ್ತಾತ್ಮಕ ವಿದ್ಯಾರ್ಥಿ ಚಳುವಳಿಯನ್ನು ಕಟ್ಟಿ ಬೆಳೆಸಿದ ಇವರು ತಾವು ನಂಬಿದ ಧ್ಯೇಯ ಸಾಧನೆಗಾಗಿ ತಮ್ಮ ಅತ್ಯಮೂಲ್ಯ ಪ್ರಾಣವನ್ನೇ ತ್ಯಾಗ ಮಾಡಿದ್ದಾರೆ. ಅತ್ಯಂತ ಬಡ ಹರಿಜನ ಕುಟುಂಬಗಳಿಂದ ಬಂದ ಈ ಸಂಗಾತಿಗಳು ತಮ್ಮ ಕುಟುಂಬಗಳ ಆಶಾಜ್ಯೋತಿಗಳಾಗಿದ್ದರು. ಇವರ ಸಾವಿನಿಂದಾಗಿ ಇವರನ್ನೇ ನಂಬಿದ್ದ ವೃದ್ಧ ತಂದೆ ತಾಯಿಗಳು ಮತ್ತು ಚಿಕ್ಕಪುಟ್ಟ ಸಹೋದರ, ಸಹೋದರಿಯರು ದುಃಖದಲ್ಲಿ ಮುಳುಗಿದ್ದಾರೆ. ಎಸ್. ಎಫ್. ಐ. ಧ್ಯೇಯೋದ್ದೇಶಗಳ ಸಾಧನೆಗಾಗಿ, ಪ್ರಜಾಪ್ರಭುತ್ವ ಚಳುವಳಿಗಾಗಿ ತಮ್ಮ ಪ್ರಾಣವನ್ನೇ ಬಲಿಕೊಟ್ಟ ಈ ಸಂಗಾತಿಗಳ ಕುಟುಂಬಗಳಿಗೆ ಸ್ವಲ್ಪ ಆರ್ಥಿಕ ನೆರವು ನೀಡಲು ಎಸ್.ಎಫ್.ಐ. ತಮಿಳುನಾಡು ಶಾಖೆಯು ನಿಧಿ ಸಂಗ್ರಹಿಸುತ್ತಿದೆ. ಎಸ್.ಎಫ್.ಐ. ಶಾಖೆಗಳು, ಸದಸ್ಯರು ಮತ್ತು ಹಿತೈಷಿಗಳು ಈ ನಿಧಿಗೆ ಉದಾರ ಧನಸಹಾಯ ನೀಡಬೇಕಾಗಿ ಕರ್ನಾಟಕ ರಾಜ್ಯ ಶಾಖೆಯ ಪ್ರಧಾನ ಕಾರ್ಯದರ್ಶಿ ಎಸ್. ಆರ್. ಆರಾಧ್ಯ ಕೋರಿದ್ದಾರೆ.

ಹಣವನ್ನು ಈ ಕೆಳಕಂಡ ವಿಳಾಸಕ್ಕೆ ಮನಿಯಾರ್ಡರ್ ಮಾಡಲು ವಿನಂತಿಸಲಾಗಿದೆ.

ಎಸ್. ಆರ್. ಆರಾಧ್ಯ
ಎಲ್-56, ಕೆ.ವಿ. ಟೆಂಪಲ್ ರಸ್ತೆ
ಸುಲ್ತಾನ್ ಪೇಟೆ
ಬೆಂಗಳೂರು-560 053

●



Printed by P. Ramachandra Rao at Nutan Printing Publishing & Training Centre, 405, Sampige Road, Malleswaram, Bangalore-560 003, and Published by him on behalf of the Communist Party of India (Marxist) Karnataka State Committee, L-56, K. V. Temple Street Sultanpet, Bangalore-560 053. Editorial and managerial office : L-56, K. V. Temple Street, Sultanpet Bangalore-560 053. Phone-24154
*EDITOR :* **M. K. BHAT**